# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ನವಂಬರ್ 2008 | ಆಂತರಿಕ ಪ್ರಸಾರಕ್ಕಾಗಿ ಮಾತ್ರ | ಸಂಪುಟ 1 ಸಂಚಿಕೆ 6


ಪ್ರಿಯ ಸಹೋದರ ಸಹೋದರಿಯರೇ,

2008 ನೇ ವರ್ಷದ ಎಕೋ ಇಂಡಿಯಾ ವಾರ್ತಾಪತ್ರದ ಕೊನೆಯ ಸಂಚಿಕೆಗೆ ಸುಸ್ವಾಗತ. ಈ ವಾರ್ತಾಪತ್ರದ ತಂಡಕ್ಕೆ ದೇಶಾದ್ಯಂತ ಮಿಷನ್ನಿನ ಆಗುಹೋಗುಗಳ ಮಾಹಿತಿಯನ್ನು ಸಂಗ್ರಹಿಸಿ ಎಂಟು ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸುವುದು ಹರ್ಷ ತಂದಿತು. ಅನುವಾದ ತಂಡದ ಪೂರ್ಣ ಪ್ರಮಾಣದ ಸಹಕಾರದ ವಿನಃ ವಾರ್ತಾಪತ್ರದ ಸಕಾಲಿಕ ಬಿಡುಗಡೆ ಸಾಧ್ಯವಾಗುತ್ತಿರಲಿಲ್ಲ. ವಾರ್ತಾಸ್ವಯಂಸೇವಕರು, ವಲಯ ಸಂಘಟಕರು ಮತ್ತು ವಲಯ ಮುಖ್ಯಸ್ಥರು ತೋರುತ್ತಿರುವ ಅತ್ಯುತ್ಸಾಹದಿಂದ ವಿಷಯಸಂಗ್ರಹಣೆ ಎಂದಿಗೂ ಹೆಚ್ಚುತ್ತಲೇ ಇದೆ.

ನವೆಂಬರ್ ನ ಈ ವಾರ್ತಾಪತ್ರವು ತಮಿಳುನಾಡು, ಚೀನಾ ಮತ್ತು ಆಂಧ್ರಪ್ರದೇಶಗಳಿಗೆ ಗುರುಗಳು ನೀಡಿದ ಭೇಟಿಗಳ ಕುರಿತು ವರದಿಗಳನ್ನು ಹೊಂದಿದೆ. ದೇಶಾದ್ಯಂತ ಅನೇಕ ಶಾಲಾಕಾಲೇಜುಗಳಲ್ಲಿ ನಡೆದ ಪ್ರಬಂಧ ಸ್ಪರ್ಧೆ, ತರಬೇತಿ ಕಾರ್ಯಕ್ರಮಗಳು, ಮುಕ್ತಸಭೆಗಳು, ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಉಪಕ್ರಮ ಮುಂತಾದವು ಈ ಸಂಚಿಕೆಯ ಮುಖ್ಯ ಸುದ್ದಿಗಳಾಗಿವೆ. 2009 ಜನವರಿ ಸಂಚಿಕೆಗೆ ವಾರ್ತಾಲೇಖನಗಳನ್ನು ಕಳುಹಿಸುವ ಕೊನೆಯ ದಿನಾಂಕ 15 ಡಿಸೆಂಬರ್ 2008. ದಯವಿಟ್ಟು ಸುದ್ದಿಬರಹವನ್ನು ಘಟನೆಗಳ ಕೆಲವು ಭಾವಚಿತ್ರಗಳೊಂದಿಗೆ ನಿಮ್ಮ ವಲಯ ಸಂಘಟಕರು ಅಥವಾ ವಲಯ ಮುಖ್ಯಸ್ಥರ ಮೂಲಕ ಕಳುಹಿಸಬೇಕು.

ಸಂಪಾದಕೀಯ ತಂಡ.

## ಮಧುರೈಗೊಂದು ಭಾವನಾತ್ಮಕ ಭೇಟಿ



ಗುರುಗಳು ತಿರುಚ್ಚಿಯಿಂದ ರಸ್ತೆ ಪ್ರಯಾಣ ಮಾಡಿ ಆಗಸ್ಟ್ 30 ರ ಸಂಜೆಯಂದು ಮಧುರೈ ಆಶ್ರಮಕ್ಕೆ ಬಂದಿಳಿದರು. ಚೆನ್ನೈ ಮತ್ತು ತಿರುಪೂರಿನ ನಂತರ ಮಧುರೈ ತಮಿಳುನಾಡಿನ ಅತಿ ದೊಡ್ಡ ಆಶ್ರಮವಾಗಿದೆ. ಸುಮಾರು 3 ಎಕರೆ ವಿಸ್ತಾರ ಹೊಂದಿದ ಆಶ್ರಮದ ಅರೆಸ್ಥಾಯಿಯಾದ ಧ್ಯಾನಮಂದಿರದಲ್ಲಿ ಗುರುಗಳೊಂದಿಗೆ ವಾರಾಂತ್ಯದಲ್ಲಿ ಇರಲು ಬಂದಿರುವ ಮಧುರೈನ ಸುತ್ತಮುತ್ತಲಿನ ಎಲ್ಲಾ ಕೇಂದ್ರಗಳ ಅಭ್ಯಾಸಿಗಳಿಗಾಗಿ ಸ್ಥಳಾವಕಾಶವಿತ್ತು. ಪ್ರತಿನಿಧಿಗಳ ಕಾರ್ಡುಗಳ ಮೇಲೆ ಮುದ್ರಿಸಿದ ವಿಷಯವು 'ಗುರುಗಳ ಪ್ರೀತಿಯಲ್ಲಿ ಬೆಚ್ಚಗಿರುವುದು' ಎಂಬುದಾಗಿತ್ತು.

ಭಾನುವಾರ 31ನೇ ಆಗಸ್ಟ್ ರಂದು ಸತ್ಸಂಗದ ನಂತರ ಗುರುಗಳು ಸರಳವಾದ ತಮಿಳಿನಲ್ಲಿ ನಿರರ್ಗಳವಾಗಿ ಮಾತನಾಡಿದರು. ಅವರು ಹೆಂಗಳೆಯರು ತಮ್ಮ ಪತಿಯ ಕೈ ಹಿಡಿದರೂ ಗುರುಗಳನ್ನು ತಮ್ಮ ಹೃದಯದಲ್ಲಿ ಕಾಯ್ದುಕೊಳ್ಳಬೇಕೆಂದು ಹೇಳಿದರು. ಸಹಜಮಾರ್ಗದಲ್ಲಿ ಗಂಡ ಹೆಂಡತಿಯರಿಬ್ಬರೂ ಇದ್ದರೆ ಇನ್ನೂ ಒಳಿತು. ಸುಖೀಸಂಸಾರಕ್ಕಾಗಿ ಕೋಪ, ಶಂಕೆ ಮತ್ತು ಮಾತ್ಸರ್ಯ ಇವು ಮೂರನ್ನೂ ದೂರವಿಡಬೇಕು. ಕೊನೆಯಲ್ಲಿ ಗುರುಗಳು ನಾವು ಭೂಮಿಯ ಮೇಲೆ ಮನೆ ಕಟ್ಟುವುದರ ಬಗ್ಗೆ ಭ್ರಾಂತಿಯನ್ನು ಹೊಂದಿರುವುದಕ್ಕಿಂತ ನಮ್ಮ ಮನೆಯು ನಮ್ಮೊಳಗೆ ಇದೆಯೆಂಬುದನ್ನು ನೆನಪಿಡಬೇಕೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಗುರುಗಳು ತಮ್ಮ ನೆನಪಿನ ಓಣಿಯಲ್ಲಿ ಸಾಗಲು ಕಾಲಾವಕಾಶ ಮಾಡಿಕೊಂಡು ತಾವು ಮದುವೆಯಾದ ಕಲ್ಯಾಣಮಂಟಪಕ್ಕೆ ಹಾಗೂ ಮೊದಲು ಸತ್ಸಂಗ ನಡೆಯುತ್ತಿದ್ದ ವಾಲಮ್ ಜೀ ಭವನಕ್ಕೆ ಭೇಟಿಯಿತ್ತರು. ಗುರುಗಳು ಟಿಟಿಕೆಯಲ್ಲಿನ ತಮ್ಮ ವೃತ್ತಿಜೀವನದಲ್ಲಿ ಈ ಪ್ರದೇಶಕ್ಕೆ ಭೇಟಿಯಿತ್ತಾಗಿನ ಹಳೆ ನೆನಪುಗಳನ್ನು ಮೆಲುಕು ಹಾಕುವಾಗಲೆಲ್ಲ ಭಾವನಾತ್ಮಕ ವಾತಾವರಣ ಉಂಟಾಯಿತು.

ಅವರು ವಿರುಧುನಗರ್ ನ ಸಮೀಪದ ಚಿನ್ನವಲ್ಲಿಕುಳಂ ಆಶ್ರಮಕ್ಕೆ ಲಘು ಭೇಟಿ ನೀಡಿ ಸ್ಥಳೀಯ ಅಭ್ಯಾಸಿಗಳೊಂದಿಗೆ ಕೆಲಕಾಲ ವಿರಾಮವಾಗಿ ಮಾತನಾಡಿದರು. ಅವರು "ನಾನಿಲ್ಲಿ ಎಂದೆಂದು ಬರುತ್ತೀನೋ, ಚೆನ್ನಾಗಿ ನಿದ್ದೆ ಮಾಡುತ್ತೇನೆ!!" ಎಂದರು. ಬಾಬೂಜಿ ಮಹಾರಾಜರು ವಿರುಧುನಗರಿಗೆ ಭೇಟಿ ನೀಡಿದಾಗಿನ ಹಳೆಯ ಭಾವಚಿತ್ರಗಳನ್ನೂ ಸಹ ಗುರುಗಳು ನೋಡಿದರು ಹಾಗೂ ದೊಡ್ಡ ಗುಂಪಿನ ಚಿತ್ರದಲ್ಲೂ ಕೂಡ ಅಭ್ಯಾಸಿಗಳನ್ನು ಎಚ್ಚರದಿಂದ ಗುರುತಿಸಿದರು. ಟಿಟಿಕೆಯಲ್ಲಿನ ಅವರ ಜೊತೆಗಾರರಲ್ಲಿ ಬಹಳಷ್ಟು ಜನ ತೀರಿಕೊಂಡಿದ್ದಾರೆಂದು ತಿಳಿದು ಅವರಿಗೆ ಖೇದವಾಯಿತು.

ಎಂದಿನಂತೆ, ಗುರುಗಳು ದಿನಾಲೂ ನೂರಾರು ಅಭ್ಯಾಸಿಗಳನ್ನು ಬರಮಾಡಿಕೊಂಡು ಅವರ ವ್ಯಕ್ತಿಗತ ಸಮಸ್ಯೆಗಳು ಹಾಗು ಕೋರಿಕೆಗಳನ್ನು ಗಮನಿಸಿಕೊಳ್ಳಲು ಸಮಯಾವಕಾಶ ಮಾಡಿಕೊಂಡರು. ಸೆಪ್ಟೆಂಬರ್ 3 ರಂದು ಗುರುಗಳು ಚೆನ್ನೈಗೆ ಮರಳಿದರು.









## ಚೀನಾಗೆ ಗುರುಗಳ ಐತಿಹಾಸಿಕ ಪ್ರಥಮ ಭೇಟಿ(16–23 ಸೆಪ್ಟೆಂಬರ್ 2008)

ಗುರುಗಳು ಶಾಂಘೈ ಪುಡಾಂಗ್ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಬಂದಿಳಿದರು ಹಾಗೂ ಇಮ್ಮಿಗ್ರೇಶನ್ ತಪಾಸಣೆಯ ನಂತರ ಅವರು ಕಾರಿನಲ್ಲಿ ಕುಳಿತುಕೊಳ್ಳುತ್ತಿರುವಂತೆಯೇ ಹೇಳಿದರು, "ಅಂತೂ ಕೊನೆಗೆ ನಾವು ಚೀನಾದಲ್ಲಿದ್ದೇವೆ." ಸ್ಥಳೀಯ ಅಭ್ಯಾಸಿಗಳು ಹಾಗೂ ಇತರ ದೇಶಗಳಿಂದ ಬಂದ ಚೀನೀ ಅಭ್ಯಾಸಿಗಳನ್ನೊಳಗೊಂಡ ಚಿಕ್ಕ ಗುಂಪು ಉತ್ಸುಕತೆಯಿಂದ ಔತಣವನ್ನು ಆಯೋಜಿಸಿದ್ದು ಅವರು ಗುರುಗಳು ಉಳಿದುಕೊಂಡಿದ್ದ ಗ್ರೀನ್ ಕೋರ್ಟ್ ನಲ್ಲಿ ಕಾಯುತ್ತಿದ್ದರು. ಅವರು ಕೂಡಲೇ ಒಂದು ಬೈಠಕನ್ನು ಸೂಚಿಸಿ ಹೇಳಿದರು. ಬಾಣ ಬಿರುಸನ್ನು ನಾವು ಪ್ರಾರಂಭಿಸೋಣ ಹಾಗೂ ಬೀಜಿಂಗ್ ಒಲಂಪಿಕ್ಸ ನಂತೆ ಪಂಜನ್ನು ಉರಿಸೋಣ. ಅವರು ಕೋಣೆಯಲ್ಲಿ ಇರುವವರೆಲ್ಲಾ ಅಭ್ಯಾಸಿಗಳು ಹೌದೇ ಎಂದು ವಿಚಾರಿಸಿದರು ಹಾಗೂ ತಕ್ಷಣವೇ ಹಾಗಿಲ್ಲದಿದ್ದರೂ ಚಿಂತೆಯಿಲ್ಲ, ಏಕೆಂದರೆ ಅವರು ಇಡೀ ಚೀನಾಕ್ಕೇ ಪ್ರಾಣಾಹುತಿ ಕೊಡುತ್ತಾರೆಂದು ಹೇಳಿದರು.

ಗುರುಗಳು 'ಹೃದಯದ ಭಾಷೆ' ಎಂಬ ವಿಷಯದ ಮೇಲೆ 3 ದಿನದ ಸಭೆಯನ್ನು ಆಯೋಜಿಸಿದರು. ಅವರು 40 ಅಭ್ಯಾಸಿಗಳ ಗುಂಪಿನೊಡನೆ ವಿಹಾರ ಮತ್ತು ಖರೀದಿಗಾಗಿ ಸಮಯವನ್ನು ಹೊಂದಿಸಿಕೊಂಡರು. ಕೆಲವೊಮ್ಮೆ ಭೋಜನದ ನಂತರ ಅವರು ಬಹಳ ಹೊತ್ತು ಮಾತನಾಡುತ್ತಾರೆ. ಚೀನಾದ ಬಗ್ಗೆ ಅವರು ಚೀನಾದ ಅಭ್ಯಾಸಿಗಳನ್ನು ಆಶೀರ್ವದಿಸಿ ಈಗ ಬಿತ್ತಿದ ಬೀಜಗಳು ಭವಿಷ್ಯದಲ್ಲಿ ಫಲವತ್ತಾದ ಬೆಳೆಯನ್ನು ನೀಡಲಿ ಎಂದು ಆಶಿಸಿದರು. ಸಹಜಮಾರ್ಗವು ಚೀನಾದ ಶಾಂಕ್ಸಿ ಪ್ರಾಂತದ ಕ್ಸಿಯಾನ್ ನಗರದಲ್ಲಿ ಬೆಳೆಯಲಿದೆ ಎಂದು ವಿಶೇಷ ಸೂಚನೆ ನೀಡಿದರು.





ಚೀನಾದವರಿಗೆಂದೇ ವಿಶೇಷವಾಗಿ ನಡೆಸಿದ ಸಭೆಯಲ್ಲಿ ಗುರುಗಳು ನೀಡಿದ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ:

> ನಾವು ನಮ್ಮಲ್ಲಿ ದೇಶ, ಮತ ಇತ್ಯಾದಿಯಾಗಿ ಭೇದ ಮಾಡುತ್ತೇವೆ. ಆದರೆ ಈ ವ್ಯತ್ಯಾಸಗಳನ್ನು ಭಗವಂತ ಸೃಷ್ಟಿಸಲಿಲ್ಲ. ಭಗವಂತ ಮಾನವ ಮತ್ತು ಪ್ರೇಮವನ್ನು ಹೊರತುಪಡಿಸಿ ಮತ್ತೇನನ್ನೂ ಸೃಷ್ಟಿಸಲಿಲ್ಲ.
>
> ಮೊದಲು ನಾವು ಸ್ವತಃ ಮಾನವರಾಗಿ ಇತರರನ್ನು ಮಾನವರನ್ನಾಗಿ ಮಾಡಲು ನೆರವಾಗಬೇಕು.
>
> ನಾವು ನಿಮ್ಮ ಆಯ್ಕೆಯನ್ನು ನಿಮ್ಮ ಮುಂದಿಡಲು ಹಾಗೂ ಆ ಆಯ್ಕೆಯೊಡನೆ ಜೀವನ ನಡೆಸಲು ಮತ್ತು ನೀವು ಕಳೆದುಕೊಂಡ ನಿಮ್ಮ ಆಂತರಿಕ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಸಹಾಯ ಮಾಡುವುದಕ್ಕಾಗಿ ಬಂದಿದ್ದೇವೆ.

ನಾವು ನಿಜವಾಗಿಯೂ ಅವರ ಸೇವೆ ಮಾಡಲು ಇಚ್ಛಿಸುತ್ತಿದ್ದೇವೆಯೇ?
ಅದಕ್ಕೆ ಬೇಕಾದ ಗುಣಗಳು : CAD
C – ವಚನಬದ್ಧತೆ (Committment)
A – ಅನ್ವಯ (Application)
D – ದೃಢಸಂಕಲ್ಪ (Determination)
ಪಿ. ರಾಜಗೋಪಾಲಾಚಾರಿ, ಚೀನಾ 2008

## ಹೈದರಾಬಾದ್ ಗೆ ಗುರುಗಳ ಭೇಟಿ

ಗುರುಗಳು ಚೆನ್ನೈಯಿಂದ 11 ಅಕ್ಟೋಬರ್ 2008 ರ ಶನಿವಾರದಂದು ಆಗಮಿಸಿದರು. ಆಶ್ರಮದಲ್ಲಿ ಮುಖ್ಯದ್ವಾರದಿಂದ ಕಾಟೇಜಿನ ಹಾದಿಯುದ್ದಕ್ಕೂ ಶಾಂತಿಯಿಂದ ಶಿಸ್ತಾಗಿ ನಿಂತ ಅಭ್ಯಾಸಿಗಳಿಂದ ಅವರಿಗೆ ಸ್ವಾಗತ ದೊರೆಯಿತು. ಧ್ಯಾನಮಂದಿರದಲ್ಲಿ ಅವರು ಸಂಜೆ ಸತ್ಸಂಗವನ್ನು ನಡೆಸಿಕೊಟ್ಟರು.

ಈ ಭೇಟಿಯಲ್ಲಿ ಗುರುಗಳು ಆಂಧ್ರಪ್ರದೇಶದ ವಿವಿಧ ಭಾಗಗಳಿಂದ ಬಂದ ಅಭ್ಯಾಸಿಗಳನ್ನು ಸಂಧಿಸಿದರು ಹಾಗೂ ಮಿಷನ್ನಿನ ಅನೇಕ ಆಡಳಿತಾತ್ಮಕ ವಿಷಯಗಳನ್ನು ಚರ್ಚಿಸಿದರು. ಅವರು ಅಂದು 4 ಜನ ಪ್ರಶಿಕ್ಷಕರನ್ನು ತಯಾರು ಮಾಡಿದರು ಹಾಗೂ ಸಂತೋಷವಾಗಿಯೂ, ಆರಾಮವಾಗಿಯೂ ಕಾಣುತ್ತಿದ್ದರು.

12ನೇ ತಾರೀಖು ಭಾನುವಾರದಂದು ಗುರುಗಳು 3 ಮದುವೆಗಳನ್ನು ನೆರವೇರಿಸಿದರು. ಅದಾದ ನಂತರಗುರುಗಳು ಹೀಗೆ ಪ್ರಾರಂಭಿಸುತ್ತಾ ಉಪನ್ಯಾಸ ನೀಡಿದರು, "ನನ್ನ ಕೆಲಸದಲ್ಲಿ ಎರಡು ಅಂಶಗಳಿವೆ. 1:ನಾನು ಗುರುಗಳ ಅಪ್ಪಣೆಗಿಂತ ಹೆಚ್ಚೇನನ್ನೂ ಮಾಡಲಾರೆ. 2:ಅವರ ಆಣತಿಯಂತೆ ನಡೆಯಲು ನನಗೆ ಶಕ್ತಿ ಮತ್ತು ಸಂಕಲ್ಪ ಇರಬೇಕು. ಮೂರನೇಯ ಮತ್ತು ಎಲ್ಲಕ್ಕಿಂತ ಮುಖ್ಯವಾದುದೇನೆಂದರೆ ಆ ಕೆಲಸ ನಡೆಯಲು ಫಲಾನುಭವಿಗಳಾದ ನಿಮ್ಮೆಲ್ಲರ ಸಹಕಾರ. ನನ್ನ ಪ್ರಕಾರ ಸಹಕಾರವೆಂದರೆ ಜೀವನದಲ್ಲಿ ಸಹಜಮಾರ್ಗದ ಹತ್ತು ನಿಯಮಗಳ ಪಾಲನೆ, ನಿಯಮಿತ ಸಾಧನೆ, ಶಿಸ್ತು–ಆಂತರಿಕ ಮತ್ತು ಬಾಹ್ಯ, ಶಿಸ್ತು–ಲೌಕಿಕ ಮತ್ತು ಆಧ್ಯಾತ್ಮಿಕ, ಶಿಸ್ತು–ಮನೆಯೊಳಗೆ ಹಾಗೂ ಹೊರಪ್ರಪಂಚದಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಆಲೋಚನೆಗಳ ಕ್ರಮಬದ್ಧತೆಯಲ್ಲಿ ಶಿಸ್ತು. ಏಕೆಂದರೆ ಎಲ್ಲಾ ಸಮಸ್ಯೆಗಳ ಮೂಲ ಅಲ್ಲೇ ಇರುವುದು."






ಭಾನುವಾರ ಮಧ್ಯಾಹ್ನ ಸುಮಾರು 125 ಪ್ರಶಿಕ್ಷಕರನ್ನೊಳಗೊಂಡ ಆಂಧ್ರಪ್ರದೇಶದವರೇ ಹೆಚ್ಚಾಗಿರುವ ಪ್ರಶಿಕ್ಷಕರ ಸಮಾವೇಶ ಇತ್ತು. ಪ್ರಶಿಕ್ಷಕರಿಗೆಲ್ಲಾ ಗುರುಗಳ ಅಕ್ಟೋಬರ್ 8 ರ ಸಂದೇಶವನ್ನು ಮತ್ತು ಮುಂಜಾನೆಯ ಉಪನ್ಯಾಸವನ್ನು ಅವಲೋಕಿಸಲು ಅವಕಾಶ ದೊರೆಯಿತು. ನಂತರ ಗುರುಗಳು ಬರುತ್ತಲೇ ಪ್ರಶಿಕ್ಷಕರೊಂದಿಗೆ ಮಾತನಾಡಿ ಒಂದು ಬೈಠಕನ್ನು ನೀಡಿದರು.

ಅವರು ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಅವರ ಕೆಲಸಗಳು ಬೇಗನೇ ಪೂರ್ಣಗೊಂಡಿದ್ದರಿಂದ ಒಂದು ದಿನ ಮುಂಚಿತವಾಗಿಯೇ ಹೊರಡಲು ನಿರ್ಧರಿಸಿದರು.

ಸೋಮವಾರ ಗುರುಗಳು ಸುಮಾರು ಐದು ವರ್ಷಗಳ ನಂತರ ಭೇಟಿ ನೀಡಲು ದೊಮ್ಮಲಗೂಡ ಯೋಗಾಶ್ರಮಕ್ಕೆ ಹೊರಟರು. ಅಲ್ಲಿ ಗುರುಗಳು ಸಂಜೆ ಸತ್ಸಂಗವನ್ನು ನಡೆಸಿಕೊಟ್ಟು ರಾತ್ರಿ ಆಶ್ರಮದಲ್ಲಿ ತಂಗಿದರು. ಮಂಗಳವಾರ ಮುಂಜಾನೆ ಗುರುಗಳು ಕೊಲ್ಕಾತಾಗೆ ಹೊರಟರು.





## ನೀತಿ ಮತ್ತು ಸದಾಚಾರ

### ಅಣ್ಣಾ ವಿಶ್ವವಿದ್ಯಾಲಯ, ಚೆನ್ನೈ

21ನೇ ಆಗಸ್ಟ್ ರಂದು ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದ ಆವರಣದಲ್ಲಿ ಮುದ್ರಣ ತಂತ್ರಜ್ಞಾನ ವಿಭಾಗದ 125 ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಹಾಗೂ 6 ಶಿಕ್ಷಕರಿಗಾಗಿ ಒಂದು ಉಪನ್ಯಾಸ ಮತ್ತು ವಿಚಾರ ವಿನಿಮಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. SRCM ನ ಜಂಟಿ ಕಾರ್ಯದರ್ಶಿಗಳಾದ ಸೋದರ ಎ.ಪಿ.ದೊರೈಯವರು ನೀಡಿದ ಉಪನ್ಯಾಸದ ವಿಷಯ ನೀತಿ ಮತ್ತು ಸದಾಚಾರಗಳು ಅದೃಷ್ಟಕ್ಕೆ ಹಾದಿ ಮಾಡಿಕೊಡುತ್ತವೆ. ಅವರು ಸಹಜಮಾರ್ಗದ ದೃಷ್ಟಿಕೋನ ಹಾಗೂ ಈ ವಿಷಯದ ಬಗ್ಗೆ ಕಾಲಕಾಲಕ್ಕೆ ಗುರುಗಳ ಅವಲೋಕನವನ್ನು ಪ್ರಸ್ತುತಪಡಿಸಿದರು. ನೀತಿನಿಯಮಗಳು ನಿಮಗೆ ಮತ್ತು ಇನ್ನೊಬ್ಬರಿಗೆ ಅನ್ವಯಿಸುತ್ತದೆ. ಸದಾಚಾರವು ನಿಮಗಷ್ಟೇ ಸಂಬಂಧ ಪಟ್ಟಿದ್ದು. ನಿಮ್ಮ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ವ್ಯವಸ್ಥೆಗೆ ಹಾನಿ ಮಾಡುವಂತಹ ಯಾವುದನ್ನೇ ಆಗಲಿ ಯೋಚಿಸಲೂಬಾರದು, ಮಾಡಲೂಬಾರದು.

ಅನೇಕ ವಿದ್ಯಾರ್ಥಿಗಳು ಗುರು ಮತ್ತು ಮಿಶನ್ನಿನ ಕುರಿತು ಪ್ರಶ್ನೆಗಳನ್ನು ಕೇಳಿದರು ಮತ್ತು ಕೆಲವೊಬ್ಬರು ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಭೇಟಿ ನೀಡಲು ಉತ್ಸುಕತೆ ತೋರಿದರು. ಹೊಸ ಅಭ್ಯಾಸಿಯಾಗಿರುವ ಹಿರಿಯ ಉಪನ್ಯಾಸಕ ಶ್ರೀ ಕೆ.ವಿಪಿನೇಂದ್ರನ್ ರವರು ಈಸಭೆಯನ್ನು ಆಯೋಜಿಸಿದ್ದರು.





## ಅಂತರರಾಷ್ಟ್ರೀಯ ಶಾಂತಿ ದಿನಾಚರಣೆ



ಸಂಯುಕ್ತ ರಾಷ್ಟ್ರಗಳ ಅಂತರರಾಷ್ಟ್ರೀಯ ಶಾಂತಿ ದಿನಾಚರಣೆಯ ಜ್ಞಾಪಕಾರ್ಥವಾಗಿ 21 ಸೆಪ್ಟೆಂಬರ್ ರಂದು ಪ್ರಪಂಚದ ಎಲ್ಲಾ ಕೇಂದ್ರಗಳಲ್ಲೂ ಪ್ರಾರ್ಥನೆಯನ್ನು ಮಾಡಲಾಯಿತು. ಗುಜರಾತ್ ನಲ್ಲಿ ಬುಧವಾರ ಸತ್ಸಂಗ ನಡೆಯುವ ಸ್ಥಳಗಳಲ್ಲಿ ಅಭ್ಯಾಸಿಗಳ ಸ್ನೇಹಿತರು ಮತ್ತು ಸಹಕರ್ಮಿಗಳನ್ನು ಜೊತೆಗೂಡಲು ಆಹ್ವಾನಿಸಲಾಗಿತ್ತು. ಪ್ರಾರ್ಥನೆಯ ನಂತರ ಗುರುಗಳು ಜುಲೈ 23 ರಂದು ಲಖನೌನಲ್ಲಿ ನೀಡಿದ ಇಂಗ್ಲೀಷಿನ ಉಪನ್ಯಾಸವನ್ನು ಕೇಳಿಸಲಾಯಿತು ಅಥವಾ ಓದಲಾಯಿತು. ಇದರಿಂದ ಆಹ್ವಾನಿತರಿಗೆ ಸಹಜಮಾರ್ಗದ ಉದ್ದೇಶದ ಸಾರಾಂಶವು ಸ್ಪಷ್ಟವಾಯಿತು.

## ಮಂಗಳೂರು, ಕರ್ನಾಟಕ

24 ಆಗಸ್ಟ್ ರಂದು ಮಂಗಳೂರು ಕೇಂದ್ರದಲ್ಲಿ ಸೋದರ ಮೋಹನ್‌ದಾಸ್ ಹೆಗಡೆಯವರು ಪ್ರಬುದ್ಧ ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಿಷನ್ನಿನ ಸರಿಯಾದ ತಿಳುವಳಿಕೆಯ ಮೂಲಕ ಅಭ್ಯಾಸಿಗಳ ಆಧ್ಯಾತ್ಮಿಕ ಬೆಳವಣಿಗೆಗೆ ಒತ್ತು ನೀಡಲು ಹಾಗೂ ಅಭ್ಯಾಸಿಗಳು ಗುರುಗಳಿಂದ ಸತತ ಆಧ್ಯಾತ್ಮಿಕ ಬೆಂಬಲವನ್ನು ತೆಗೆದುಕೊಳ್ಳಲು ಪ್ರೋತ್ಸಾಹ ನೀಡುವುದು ಇದರ ಗುರಿಯಾಗಿತ್ತು.

ಹೊಸ ಮತ್ತು ಹಳೆಯ ಅಭ್ಯಾಸಿಗಳಿಗಿಬ್ಬರಿಗೂ ಉಪಯೋಗವಾಗುವಂತಹ ಮೂಲತತ್ವಗಳ ವಿವರಣೆಯು ಇದರ ಮುಖ್ಯಾಂಶವಾಗಿತ್ತು. ಭಂಡಾರಗಳಲ್ಲಿ ಹಾಜರಿರುವ ಅಗತ್ಯ, ಗುರುಗಳ ಮೇಲೆ ಪ್ರೇಮ ಬೆಳೆಸಿಕೊಳ್ಳುವುದು, ಪ್ರಾರ್ಥನೆಯ ಪರಿಣಾಮಕತ್ವ ಶಕ್ತಿಯನ್ನು ವಿವರಿಸಲಾಯಿತು. ಪರಿಸ್ಥಿತಿಯ ನಿರ್ಮಾಣ ಹೇಗೆ ಮಾಡುವುದೆನ್ನುವುದರ ಬಗ್ಗೆ ಗುರುಗಳು ದುಬೈನಲ್ಲಿ ಅಭ್ಯಾಸಿಗಳೊಡನೆ ನಡೆಸಿದ ಚರ್ಚೆಯ ವಿಡಿಯೋ ತುಣುಕನ್ನು ತೋರಿಸಲಾಯಿತು. ಎಂದೆಂದು ಅಭ್ಯಾಸಿಯಲ್ಲಿ ಗುರುಗಳು ಅತ್ಯಾನಂದದ ಸ್ಥಿತಿಯನ್ನುಂಟು ಮಾಡುತ್ತಾರೋ, ಅವನು ಆ ಸ್ಥಿತಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ಆದಷ್ಟು ಕಾಲ ಅದೇ ಸ್ಥಿತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು.

## ಪ್ರಕಟನೆ – ಹೊಸ ಬಿಡುಗಡೆ




ದೀಪಾವಳಿಯಂದು ತಮಿಳಿನ ಎರಡು ಉಪನ್ಯಾಸಗಳನ್ನೊಳಗೊಂಡ ಡಿವಿಡಿಯ ಬಿಡುಗಡೆ

ತಿರುಪೂರಿನ ಧ್ಯಾನಮಂದಿರದ ಉದ್ಘಾಟನೆ
2 ಮಾರ್ಚ್ 2008–25 ನಿಮಿಷ

ಮಧುರೈನಲ್ಲಿ ನೀಡಿದ ಉಪನ್ಯಾಸ
31 ಆಗಸ್ಟ್ 2008–20 ನಿಮಿಷ

## ಕೊಡೈಕೆನಾಲ್, ತಮಿಳುನಾಡು

ಸಹಜಮಾರ್ಗವನ್ನು ಈ ಗಿರಿಧಾಮಕ್ಕೆ ಕರೆತರಬೇಕೆಂಬ ಮಿಷನ್ನಿನ ಪ್ರಯತ್ನಗಳಿಗೆ ಮಧುರೈ ಕೇಂದ್ರ ಮತ್ತು ಕೊಡೈಕೆನಾಲ್‌ನ ಸ್ಥಳೀಯ ಅಭ್ಯಾಸಿಗಳು ಒತ್ತಾಸೆಯಾಗಿದ್ದಾರೆ. 12 ಡಿಸೆಂಬರ್‌ರಂದು 20 ಶಿಕ್ಷಕರಿಗಾಗಿ ಸಹಜಮಾರ್ಗದ ಬಗ್ಗೆ ಮಾಡಿದ ಉಪನ್ಯಾಸವು ಬೃಂದಾವನ ಪಬ್ಲಿಕ್ ಶಾಲೆಯಲ್ಲಿ ನಡೆಯಿತು. ಇದರಲ್ಲಿ ಪದ್ಧತಿ, ಮಿಷನ್, ಮಾರ್ಗ ಮತ್ತು ಪ್ರಾಯೋಗಿಕ ಒಳಿತು ಇತ್ಯಾದಿ ವಿಷಯಗಳು ಸೇರಿದ್ದವು. ಕೆಲ ಶಿಕ್ಷಕರು ಪದ್ಧತಿಯನ್ನು ಸೇರಲು ಇಚ್ಛೆ ಪಟ್ಟರು. ಪ್ರಾಂಶುಪಾಲರಾದ ಶ್ರೀ ಮುನ್ನಾಸಿಂಗ್‌ರವರು ಶೀಘ್ರದಲ್ಲೇ ವಿ.ಬಿ.ಎಸ್.ಇ. ತರಬೇತಿ ಕಾರ್ಯಕ್ರಮವನ್ನು ಶಿಕ್ಷಕರಿಗೆ ಪರಿಚಿತ ಮಾಡಿಕೊಡಲು ಒಪ್ಪಿಕೊಳ್ಳುವ ಮೂಲಕ ತಮ್ಮ ಸಹಕಾರ ತೋರಿದರು.

ಗ್ರಾಮೀಣ ಅಭಿವೃದ್ಧಿಯನ್ನು ಕಲಿಸುವ ಶ್ರೀಜಯೇಂದ್ರ ಸರಸ್ವತಿ ವಿಶ್ವವಿದ್ಯಾಲಯದಲ್ಲಿ ಎರಡು ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೊದಲನೇದಿನ 26 ಸೆಪ್ಟೆಂಬರ್‌ರಂದು ಹತ್ತು ಶಿಕ್ಷಕರಿಗಾಗಿ ನಡೆಸಲಾಯಿತು. ಮರುದಿನ ಒಂದು ನೂರು ವಿದ್ಯಾರ್ಥಿಗಳು ಸಹಜಮಾರ್ಗ ಪದ್ಧತಿಯ ಧ್ಯಾನದ ಬಗೆಗಿನ ಸಭೆಯಲ್ಲಿ ಹಾಜರಿದ್ದರು. ಹದಿನೈದು ಜನ ಸಾಧನೆಯನ್ನು ಪ್ರಾರಂಭಿಸಲು ಇಚ್ಛಿಸಿದರು. ಸೋದರ ಪ್ರಸಾದ್, ವಿ.ಸಿ.ರಾವ್ ಮತ್ತು ಸ್ಥಳೀಯ ಅಭ್ಯಾಸಿಗಳು ಈ ಕಾರ್ಯಕ್ರಮದ ಸಂಘಟಕರಾಗಿದ್ದರು.

## ಆಶ್ರಯ – ಹಿರಿಯ ಜೀವಗಳಿಗೊಂದು ನೆಲೆ

ಗುರುಗಳ ಆಶೀರ್ವಾದದಿಂದ ಈರೋಡ್‌ನಲ್ಲಿ ವೃದ್ಧರಿಗೊಂದು ನೆಲೆಯಾದ 'ಆಶ್ರಯ'ದ ಉದ್ಘಾಟನೆಯಲ್ಲಿ ಸುಮಾರು 250 ಅಭ್ಯಾಸಿಗಳ ಗುಂಪು ಭಾಗವಹಿಸಿತ್ತು. ಒಬ್ಬ ಅಭ್ಯಾಸಿ ಸೋದರರ ಉತ್ತೇಜನದಿಂದ ಇದು ಸಾಧ್ಯವಾಯಿತು.

ಸಮಾರಂಭವು ತಿರುಪೂರಿನ ಕೆಲವು ಅಭ್ಯಾಸಿಗಳ ಆಗಮನದ ನಂತರ ಬೆಳಿಗ್ಗೆ 7 ಘಂಟೆಗೆ ಪ್ರಾರಂಭವಾಯಿತು. ಸತ್ಸಂಗದ ತರುವಾಯ ಕೆಲ ಸೋದರರು ಸಮಾಜದ ಬಗ್ಗೆ ಸಹಜಮಾರ್ಗದ ದೃಷ್ಟಿಕೋನ ಮತ್ತು ವೃದ್ಧರ ಹಿತಾಸಕ್ತಿಯ ಬಗೆಗೆ ಉಪನ್ಯಾಸ ನೀಡಿದರು.

ಭಾಗವಹಿಸಿದವರೆಲ್ಲರೂ ಗ್ರಹಣಶಕ್ತಿ ಉಳ್ಳವರಾಗಿದ್ದು ಎಲ್ಲರೂ ಹಿತಕರ ವಾತಾವರಣವನ್ನು ಮತ್ತು ಗುರುಗಳ ಕೃಪೆಯನ್ನು ಅನುಭವಿಸಿದರು.





## ತರಬೇತಿ ಕಾರ್ಯಕ್ರಮಗಳು

### ಪನ್‌ಶೆತ್ ರಿಟ್ರೀಟ್ ಕೇಂದ್ರ

ಪನ್‌ಶೆತ್ ರಿಟ್ರೀಟ್ ಕೇಂದ್ರದಲ್ಲಿ ಅಕ್ಟೋಬರ್ 2 ಮತ್ತು 3 ರಂದು 2 ದಿನದ ಮಹಾರಾಷ್ಟ್ರ ಎಸ್.ಆರ್.ಸಿ.ಎಮ್. ಯುವಸಭೆಯ ವಿಷ್ಯವು 'ಗುರುಗಳೊಂದಿಗೆ ಆಪ್ತತೆ ಬೆಳೆಸಿಕೊಳ್ಳುವುದು' ಎಂಬುದಾಗಿತ್ತು. ರಿಟ್ರೀಟ್ ಕೇಂದ್ರದ ಪ್ರಶಾಂತ ವಾತಾವರಣವು ನಲ್ವತ್ತು ಅಭ್ಯಾಸಿಗಳು ಹಾಗೂ ಸಹಾಯಕ ತಂಡವನ್ನೊಳಗೊಂಡ ಕಾರ್ಯಕ್ರಮಕ್ಕೆ ಆದರ್ಶಪ್ರಾಯವಾಗಿತ್ತು. ಸಹಜಮಾರ್ಗ ಸಾಧನೆಯ ಮೂಲಭೂತ ತತ್ವಗಳ ನೆನಪು ತರುವುದರ ಜೊತೆಗೆ ಗುರುಗಳೊಂದಿಗೆ ನಮ್ಮ ಸಂಬಂಧ ಹಾಗೂ ಸಹಜಮಾರ್ಗದ ದಾರಿದೀಪಗಳಾಗಿ ಯುವಜನರ ಪಾತ್ರದಂತಹ ವಿಷಯಗಳು ಚರ್ಚಿತವಾದವು.

ಉಪನ್ಯಾಸಗಳೊಂದಿಗೆ ಚಲನಚಿತ್ರಗಳು, ಕ್ವಿಜ್, ಆಟಗಳು, ಆಸಕ್ತಿಯುತ ಪವರ್‌ಪಾಯಿಂಟ್ ಪ್ರಸ್ತುತಿಗಳು, ಗುರುಗಳ ಉಪನ್ಯಾಸಗಳ ಸಮಂಜಸಕರ ತುಣುಕುಗಳು ಹಾಗೂ ಅಭ್ಯಾಸಿಗಳಿವ್ದ ಮನಮೋಹಕ ಸಂಗೀತಗಳು ಮಿಳಿತವಾಗಿದ್ದವು. ಆಹಾರ ಮತ್ತು ವಸತಿ ಸೌಲಭ್ಯಗಳಲ್ಲದೆ ಪುಣೆ ಅಭ್ಯಾಸಿಗಳು ತೋರಿದ ಶ್ರದ್ಧೆ ಮತ್ತು ಪ್ರೇಮಗಳಿಂದ ಭಾಗವಹಿಸಿದವರಿಗೆ ಇದೊಂದು ನೆನಪಿಡಬಹುದಾದ ಅನುಭವವಾಯಿತು.

### ಘಾಜ಼ಿಯಾಬಾದ್, ಉತ್ತರಪ್ರದೇಶ

28 ಸೆಪ್ಟಂಬರ್ 2008 ರಂದು ಆಯೋಜಿಸಿದ ಕಾರ್ಯಕ್ರಮದಲ್ಲಿ 2 ವರ್ಷಗಳಿಗಿಂತ ಕಡಿಮೆ ಕಾಲ ಸಾಧನೆ ಮಾಡಿರುವ ಸುಮಾರು 50 ಅಭ್ಯಾಸಿಗಳು ಭಾಗವಹಿಸಿದ್ದರು. ಅವರೆಲ್ಲ ಘಾಜ಼ಿಯಾಬಾದ್, ಸಾಹಿಬಾಬಾದ್ ಮತ್ತು ನೋಯಡಾದಿಂದ ಬಂದಿದ್ದರು. ಪುಸ್ತಕೀಯ ಅಂಶಗಳಿಗಿಂತ ಸರಿಯಾದ ಮತ್ತು ನಿಯಮಿತ ಸಾಧನೆಯ ಮೇಲೆ ಒತ್ತು ನೀಡಲಾಯಿತು.

ಸಾಧನೆಯ ಮೂಲತತ್ವಗಳನ್ನು ಸರಳ ಮತ್ತು ಪರಿಣಾಮಕಾರಿಯಾಗಿ ಹೇಳಲಾಯಿತೆಂದು ಭಾಗಿಗಳು ಅಭಿಪ್ರಾಯ ಪಟ್ಟರು. ಪುಸ್ತಕಗಳನ್ನು ಓದಿಯೂ ಉಳಿದುಹೋದ ಸತತಸ್ಮರಣೆ ಮತ್ತು ಶುದ್ಧೀಕರಣದ ಬಗೆಗಿನ ಅನೇಕ ಸಂಶಯಗಳು ಸ್ಪಷ್ಟವಾದವು. ಇಂತಹ ತರಬೇತಿ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚೆಚ್ಚು ಅದರಲ್ಲೂ ವಿಶೇಷವಾಗಿ ಹೊಸ ಅಭ್ಯಾಸಿಗಳ ಸಲುವಾಗಿ ಏರ್ಪಡಿಸಬೇಕು.

### ಜಮ್ಮು

ಎರಡು ಮುಕ್ತಸಭೆಗಳನ್ನು 26 ಸೆಪ್ಟಂಬರ್ ಮತ್ತು 9 ಅಕ್ಟೋಬರ್‌ರಂದು ಆಯೋಜಿಸಲಾಗಿತ್ತು. ಜೆನೆಸಿಸ್ ಸ್ಪರ್ಧಾತ್ಮಕ ಶಿಕ್ಷಣ ಸಂಸ್ಥೆ (ಐ.ಎ.ಎಸ್ ಸ್ಪರ್ಧಾಳುಗಳಿಗಾಗಿ ಇರುವ ಸಂಸ್ಥೆ)ಯಲ್ಲಿ ನಡೆಸಲಾದ ಸಭೆಯಲ್ಲಿ 21–25 ವಯೋಮಾನದ ಸುಮಾರು 25 ವಿದ್ಯಾರ್ಥಿಗಳಿಗೆ ಸಹಜಮಾರ್ಗವನ್ನು 'ಸಮತೋಲಿತ ಜೀವನದ ಮಾರ್ಗ'ವೆಂದು ಪ್ರಸ್ತುತಪಡಿಸಲಾಯಿತು.

ಎರಡನೇಯದನ್ನು ಜಮ್ಮುವಿನಿಂದ 90 ಕಿ.ಮೀ ದೂರವಿರುವ ಜ್ಯೋತಿಪುರಂನಲ್ಲಿ ಭಾಗವಹಿಸಿದ ಎನ್.ಎಚ್.ಪಿ.ಸಿ. ಯ 40–45 ವಯೋಮಾನದ ನೌಕರರಿಗಾಗಿ ನಡೆಸಲಾಯಿತು. 'ಆಧ್ಯಾತ್ಮಿಕತೆಯ ಹೊಸ ಕಿರಣ'ವೆಂದು ಸಹಜಮಾರ್ಗವನ್ನು ಸಂಕ್ಷಿಪ್ತವಾಗಿ ಹೇಳಲಾಯಿತು.

ಎರಡೂ ಕಾರ್ಯಕ್ರಮಗಳಿಗೆ ಚೆನ್ನಾದ ಪ್ರತಿಕ್ರಿಯೆ ದೊರಕಿತು. ಹದಿನೈದು ಭಾಗಿಗಳು ಸಾಧನೆಯನ್ನು ಪ್ರಾರಂಭಿಸಲು ಆಸಕ್ತಿಯನ್ನು ತೋರಿದರು.



### ಹೈದರಾಬಾದ್, ಆಂಧ್ರಪ್ರದೇಶ

ಎಸ್.ಆರ್. ನಗರ್‌ನ ಧ್ಯಾನಕೇಂದ್ರದಲ್ಲಿ 28 ಸೆಪ್ಟೆಂಬರ್ 2008 ರ ಭಾನುವಾರದಂದು 120 ಅಭ್ಯಾಸಿಗಳಿಗಾಗಿ ಕಾರ್ಯಾಗಾರವನ್ನು ನಡೆಸಲಾಯಿತು. ಒಂದು ವರ್ಷದಿಂದ ಸಾಧನೆ ಮಾಡುತ್ತಿರುವ ಅಭ್ಯಾಸಿಗಳಿಗಾಗಿ ವಿಚಾರವಿನಿಮಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ತರಗತಿಗಳಲ್ಲಿ ನೀಡುವ ಸಾಮಾನ್ಯ ಉಪನ್ಯಾಸಗಳಿಗಿಂತ ಈ ವಿಚಾರವಿನಿಮಯ ಮಾದರಿಯು ಉತ್ತಮವೆಂದು ಭಾಗಿಗಳು ಭಾವಿಸಿದರು.

ಸಹಜಮಾರ್ಗಕ್ಕೆ ಸುಸ್ವಾಗತ ಕಿರುಪುಸ್ತಿಕೆಯಲ್ಲಿನ ವಿಷಯಗಳನ್ನು ಆಧರಿಸಿ ಗುಂಪು ಚರ್ಚೆ ನಡೆಸಲಾಯಿತು. ಅಭ್ಯಾಸಿಗಳು ಮುಕ್ತವಾತಾವರಣದಲ್ಲಿ ಎಲ್ಲಾ ವಿಷಯಗಳ ಬಗ್ಗೆ ಎಗ್ಗಿಲ್ಲದೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು ಮತ್ತು ಪರಸ್ಪರ ಚರ್ಚಿಸಿದರು. 'ಸಹಜಮಾರ್ಗ ಸಾಧನೆ' ಎಂಬ ವಿಷಯದ ಬಗೆಗಿನ ಗುರುಗಳ ಉಪನ್ಯಾಸವನ್ನು ಕೇಳುವುದರೊಂದಿಗೆ ಸಭೆ ಮುಕ್ತಾಯಗೊಂಡಿತು.

### ತೀನ್‌ಸುಖಿಯಾ



19 ಸೆಪ್ಟೆಂಬರ್ 2008 ರಂದು ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು 64 ಅಭ್ಯಾಸಿಗಳಿಗಾಗಿ ತೀನ್‌ಸುಖಿಯಾ ಆಶ್ರಮದಲ್ಲಿ ಮತ್ತು 19 ಅಭ್ಯಾಸಿಗಳಿಗಾಗಿ ದಿಬ್ರೂಗಢ್ ಕೇಂದ್ರದಲ್ಲಿ ನಡೆಸಲಾಯಿತು. ಸೋದರ ಅಶೋಕ್ ಸೇನ್ ಗುಪ್ತಾರವರು ಪ್ರಸ್ತುತಿಪಡಿಸಿದರು. ಅವರು ಗುರುಗಳ ಉಲ್ಲೇಖನವನ್ನು ಉದ್ದೇಶಿಸುತ್ತಾ ಹೇಳಿದರು, "ಗುರುಗಳಿಗೆ ಸಂಪೂರ್ಣ ಶರಣಾಗತರಾಗುವ ಮಾತುಗಳೆಲ್ಲ ಕೃತಕ. ಅದು ಅಷ್ಟು ಸುಲಭವಲ್ಲ. ಆದರೆ ಗುರುಗಳೇ ನಮಗೆ ಶರಣಾಗತರಾಗುವಂತೆ ಮಾಡುವುದು ಇನ್ನೂ ಸುಲಭ. ಅದು ಅವರ ಕೆಲಸವನ್ನು ಮಾಡುವುದರಿಂದ ಸಾಧ್ಯ."

### ಕರ್ನಾಟಕದ ಬೀದರ್‌ನಲ್ಲಿ ಪೂರ್ಣದಿನದ ಕಾರ್ಯಕ್ರಮ

ಬೀದರ್‌ನಲ್ಲಿ 21 ಸೆಪ್ಟೆಂಬರ್‌ನ ಭಾನುವಾರದಂದು ಪೂರ್ಣದಿನದ ಕಾರ್ಯಕ್ರಮವನ್ನು ಮಿಷನ್ನಿನ ಜಂಟಿ ಕಾರ್ಯದರ್ಶಿಗಳಾದ ಸೋದರ ಎ.ಪಿ.ದೊರೈ ಮತ್ತು ಉತ್ತರ ಕರ್ನಾಟಕ ವಲಯ ಮುಖ್ಯಸ್ಥರಾದ ಸೋದರ ರಾಜು ಕಾಶಂಪೂರ್‌ಕರ್‌ರವರು ನಡೆಸಿಕೊಟ್ಟರು ಹಾಗೂ ಈ ಕಾರ್ಯಕ್ರಮದಲ್ಲಿ ಬೀದರ್, ಭಾಲ್ಕಿ, ಹಾಣಾಕುಶನೂರ್ ಹಾಗೂ ಗುಲ್ಬರ್ಗಾದಿಂದ ಸುಮಾರು 50 ಜನ ಅಭ್ಯಾಸಿಗಳು ಹಾಜರಿದ್ದರು. ಮುಂಜಾನೆಯ ಸತ್ಸಂಗದ ನಂತರದ ಚರ್ಚೆಯಲ್ಲಿ ಅಭ್ಯಾಸಿಗಳು ಚಟುವಟಿಕೆಯಿಂದ ಭಾಗವಹಿಸಿದರು. ನಮ್ಮ ನಮ್ಮ ಕೇಂದ್ರಗಳಲ್ಲಿ ಮಿಷನ್ನಿನ ಬೆಳವಣಿಗೆಯ ಸಲುವಾಗಿ ನಮ್ಮ ಕೊಡುಗೆಯೇನು ಎಂಬುದು ಚರ್ಚಿತ ವಸ್ತುವಾಗಿತ್ತು. ಮುಕ್ತ ಸಭೆಗಳನ್ನು ಆಯೋಜಿಸುವುದು, ಗೃಹ ಸಮಾವೇಶಗಳೊಂದಿಗೆ ನಾವು ಆದರ್ಶ ವ್ಯಕ್ತಿಗಳಾಗಿ ಬದಲಾಗುವಂತೆ ಪ್ರಗತಿ ಹೊಂದಲು ಪ್ರಯತ್ನಿಸಬೇಕು ಎಂಬ ವಿವಿಧ ಅಭಿಪ್ರಾಯಗಳನ್ನು ಅಭ್ಯಾಸಿಗಳು ವ್ಯಕ್ತಪಡಿಸಿದರು. ಮಧ್ಯಾಹ್ನ ಗುರುಗಳ 'ಹಬಲ್ ಬಬಲ್' ಸರಣಿಯಿಂದ ಉಪನ್ಯಾಸವೊಂದನ್ನು ತೋರಿಸಲಾಯಿತು. ಒಟ್ಟಿನಲ್ಲಿ ಇದೊಂದು ಒಳ್ಳೆಯ ವಿಚಾರವಿನಿಮಯ ಸಭೆಯಾಗಿದ್ದು, ಅಭ್ಯಾಸಿಗಳಿಗೆ ನವಚೇತನದಿಂದ ತಮ್ಮ ಸಾಧನೆಯನ್ನು ಮಾಡುವಂತೆ ಉತ್ಸಾಹ ತುಂಬಲು ಕಾರಣವಾಗಿ ಕಲಿಕಾನುಭವ ತುಂಬಿದ ದಿನವಾಗಿತ್ತು.



## ಹೈದರಾಬಾದ್‌ನಲ್ಲಿ ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಕಾರ್ಯಕ್ರಮಗಳಿಗೆ ಉಚ್ಛ್ರಾಯ ಕಾಲ

ಹೈದರಾಬಾದ್‌ನ ಮೌಲ್ಯಾಧಾರಿತ ಶಿಕ್ಷಣ ಕೇಂದ್ರವು ಅಭ್ಯಾಸಿಗಳ ಹಾಗೂ ವಿದ್ಯಾರ್ಥಿ ವೃಂದದ ಆಧ್ಯಾತ್ಮಿಕ ಮೌಲ್ಯ ಸಾಧನೆಯ ಶಿಕ್ಷಣಕ್ಕೆ ನಿರಂತರ ಗಮನ ಕೊಡುತ್ತಾ ಬಂದಿದೆ.

'ಪರಿದೃಶ್ಯದಲ್ಲಿ ಜೀವನ' ಮತ್ತು 'ಗುರಿಯ ನಿರ್ಧಾರ' ಎಂಬ ಪರಸ್ಪರ ಸಕ್ರಿಯತೆಯಿಂದ ಕೂಡಿದ ಎರಡೂವರೆ ಗಂಟೆಗಳ ಕಾರ್ಯಕ್ರಮವನ್ನು ಉಸ್ಮಾನಿಯಾ ವೈದ್ಯಕೀಯ ವಿದ್ಯಾಲಯದ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ 22 ನೇ ಆಗಸ್ಟ್‌ರಂದು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಇದು ಬೋಧಪ್ರದ, ತಿಳುವಳಿಕೆ ನೀಡುವ, ಸ್ಫೂರ್ತಿದಾಯಕ, ಹೃದಯಸ್ಪರ್ಶಿ ಮತ್ತು ಶುದ್ಧೀಕರಿಸುವಂತಹುದು ಎಂಬ ಭಾವನೆ ಉಂಟಾಯಿತು.

ಸೆಪ್ಟೆಂಬರ್ ಎರಡನೇ ವಾರದಲ್ಲಿ, ಈ ತಂಡವು ಒಂದು ತರಬೇತಿ ಕಾರ್ಯಕ್ರಮವನ್ನು ಎಸ್.ಪಿ.ವೈ.ರೆಡ್ಡಿ ಶಾಲೆಯಲ್ಲಿ, ಆ ಸ್ಥಳದ ಸುಮಾರು 38 ಶಾಲಾಶಿಕ್ಷಕರಿಗೆ ನಡೆಸಿಕೊಡಲು ನಂದ್ಯಾಲಕ್ಕೆ ಭೇಟಿ ನೀಡಿತು. ಶಿಕ್ಷಣ, ಶಿಕ್ಷಕರ ಪಾತ್ರ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಪಠ್ಯಕ್ರಮಗಳು, ಮೌಲ್ಯಗಳು, ಜೀವನ ಮತ್ತು ಅದರ ನಿಜವಾದ ಪರಿದೃಷ್ಟಿ, ಗಣಿತದ ಮೂಲಕ ಮೌಲ್ಯಗಳ ಶಿಕ್ಷಣ, ಮನಸ್ಸಿನ ಸುನಿಯಂತ್ರಣ ಎಂಬ ವಿಷಯಗಳು ಚರ್ಚಿಸಲ್ಪಟ್ಟವು. ಮೌ.ಶಿ.ಪದ್ಧತಿಯ ಒಂದು ಪರಿಚಯಾತ್ಮಕ ಕಾರ್ಯಕ್ರಮವನ್ನುಅಭ್ಯಾಸಿಗಳಿಗೆ 7ನೇ ಸೆಪ್ಟೆಂಬರ್‌ರಂದು ನಡೆಸಿಕೊಡಲಾಯಿತು ಮತ್ತು ಇದನ್ನು ಅನುಸರಿಸಿ 20 ಮತ್ತು 21ನೇ ಸೆಪ್ಟೆಂಬರ್‌ರಂದು ಒಂದು ಪ್ರಬುದ್ಧವಾದ ತರಬೇತಿ ಕಾರ್ಯಕ್ರಮವನ್ನು 65 ಜನ ಅಭ್ಯಾಸಿಗಳಿಗೆ ನಡೆಸಲಾಯಿತು. ಲಘು ಭಾಷಣಗಳನ್ನು ಆಲಿಸುವುದಲ್ಲದೆ ಮೌಲ್ಯಾಧಾರಿತ ಆಟಗಳಲ್ಲಿ ಮತ್ತು ಲಘು ನಾಟಕ, ಹಾಡು ಮುಂತಾದ ಗುಂಪು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವರನ್ನು ಉತ್ತೇಜಿಸಲಾಯಿತು. ಶಾಲೆಗಳನ್ನು ಹೇಗೆ ಸಂಪರ್ಕಿಸಬೇಕು ಮತ್ತು ಮೌ.ಶಿ. ಕಾರ್ಯಕ್ರಮಗಳನ್ನು ಹೇಗೆ ಪ್ರತಿಪಾದಿಸಬೇಕು, ವಾಸ್ತವವಾಗಿ ಈ ಕಾರ್ಯಕ್ರಮಗಳನ್ನು ಹೇಗೆ ನಡೆಸಬೇಕು ಮತ್ತು ಈ ಕೆಲಸಗಳನ್ನು ಹೇಗೆ ಮುನ್ನಡೆಸಬೇಕೆಂದು ಅವರಿಗೆ ಸೂಚನೆಗಳನ್ನು ಕೊಡಲಾಯಿತು.

28ನೇ ಸೆಪ್ಟೆಂಬರ್‌ರಂದು ಮೌ.ಶಿ.ಪದ್ಧತಿಯ ವಿಷಯದ ಮೇಲೆ ಒಂದು ವಿಚಾರಸಂಕೀರ್ಣವನ್ನು ವಲಯಾಶ್ರಮದಲ್ಲಿ ಇ ಮತ್ತು ಎಲ್ ಗುಂಪಿನ ಶಾಲಾಶಿಕ್ಷಕರು ಮತ್ತಿತರರಿಗಾಗಿ ನಡೆಸಲಾಯಿತು. ಆಶ್ರಮದ ವಾತಾವರಣದ ಸಮೃದ್ಧ ಸ್ವಾದವನ್ನು ಭಾಗವಹಿಸಿದ ಶಿಕ್ಷಕರು ಪಡೆದುಕೊಂಡರು ಮತ್ತು ಈ ಕಾಲಾವಧಿಯು ತಮ್ಮ ಜೀವನದಲ್ಲಿ ಒಂದು ಬದಲಾವಣೆಯನ್ನು ತಂದಿದೆ ಮತ್ತು ಇದು ಪಠ್ಯಕ್ರಮವನ್ನೂ, ಮಕ್ಕಳನ್ನೂ ನಿಭಾಯಿಸುವುದರ ಮೇಲೆ ಪರಿಣಾಮವನ್ನು ಬೀರಲಿದೆ ಎಂದು ಕೆಲವರು ಹೇಳಿದರು.

### ಘಾಜಿಯಾಬಾದ್, ಉತ್ತರಪ್ರದೇಶ

ಇಲ್ಲಿನ ಆಶ್ರಮವು ಎಪ್ಪತ್ತು ಬಿ.ಎಡ್. ವಿದ್ಯಾರ್ಥಿಗಳಿಗಾಗಿ ಒಂದು ಮೌ.ಶಿ.ಪದ್ಧತಿಯ ಕಾರ್ಯಾಗಾರಕ್ಕೆ ಅನುಕೂಲ ಕಲ್ಪಿಸಿತು. ಮೌಲ್ಯಗಳ ಅವಶ್ಯಕತೆಗೆ ಒತ್ತು ನೀಡಲಾದ ಮತ್ತು ಧ್ಯಾನದ ಮೂಲಕ ಮನಸ್ಸನ್ನು ನಿಯಂತ್ರಣಗೊಳಿಸುವಿಕೆಯ ಪ್ರಾಮುಖ್ಯತೆಯನ್ನು ಬೆಳಕಿಗೆ ತಂದ ಈ ಕಾಲಾವಧಿಯಲ್ಲಿ ಕಾಲೇಜಿನ ಪ್ರಾಂಶುಪಾಲರು, ವಿಭಾಗಗಳ ಮುಖ್ಯಸ್ಥರು ಹಾಗೂ ಶಿಕ್ಷಣ ವರ್ಗದವರು ಉಪಸ್ಥಿತರಿದ್ದರು.

ಆತ್ಮದ ಪ್ರಾಮುಖ್ಯತೆ, ಮನಸ್ಸಿನ ಶುದ್ಧೀಕರಣ, ನಾನು ಯಾರು ಮತ್ತು ಮನುಷ್ಯನ ಶರೀರದಲ್ಲಿ ಆತ್ಮದ ಪಾತ್ರವೇನು, ಆತ್ಮದ ಸಂಪರ್ಕ ಪಡೆಯಲು ಮನಸ್ಸನ್ನು ಹೇಗೆ ಉಪಯೋಗಿಸಬೇಕು ಹಗೂ ನಮ್ಮನ್ನು ಸ್ಥೂಲತ್ವದಿಂದ ನಿವಾರಿಸಿಕೊಳ್ಳುವುದರ ಅಗತ್ಯ ಎಂಬಿತ್ಯಾದಿ ವಿಷಯಗಳು ಒಳಗೊಂಡಿದ್ದವು. ಈ ಪರಿಕಲ್ಪನೆಗಳನ್ನು ವಿಷದೀಕರಿಸಲು ಪ್ರಾಯೋಗಿಕ ಪ್ರದರ್ಶನಗಳ ಉಪಯೋಗ ತೆಗೆದುಕೊಳ್ಳಲಾಯಿತು.

ಮಿಷನ್ನಿನ ಹಾಗೂ ಸಹಜಮಾರ್ಗ ಧ್ಯಾನಪದ್ಧತಿಯ ಸಣ್ಣ ಪರಿಚಯವನ್ನು ಮಾಡಿಕೊಡಲಾಯಿತು. ಈ ಸಭೆಯು ಐದು ನಿಮಿಷಗಳ ಪ್ರಾರ್ಥನಾಧ್ಯಾನದೊಂದಿಗೆ ಮುಕ್ತಾಯವಾಯಿತು. ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕವರ್ಗದವರಿಂದ ಬಂದ ಪ್ರತಿಕ್ರಿಯೆಯು ಧನಾತ್ಮಕವಾಗಿತ್ತು. ಈ ಕಾರ್ಯಕ್ರಮವು ಸೋದರ ಚಂದ್ರಕಾಂತ ಮತ್ತು ಸೋದರ ಅಂಕುರ್‌ರವರಿಂದ ಸುರಳಿತಗೊಳಿಸಲ್ಪಟ್ಟಿತು.

## ರಾಂಚಿಯಲ್ಲಿ ಮೌ.ಶಿ.ಪದ್ಧತಿ

### ಸೇಂಟ್ ಅಲೋಶಿಯಸ್ ಶಾಲೆ

ಪ್ರಬಂಧ ಸ್ಪರ್ಧೆಯ ಪರಿಣಾಮವಾಗಿ ಒಂದು ಕಾರ್ಯಕ್ರಮವನ್ನು 2ನೇ ಸೆಪ್ಟೆಂಬರ್‌ರಂದು ಈ ಶಾಲೆಯ ಸಭಾಂಗಣದಲ್ಲಿ ನಡೆಸಲಾಯಿತು. ಯಾವುದೇ ತೊಂದರೆಯಿಲ್ಲದೆ ಮಾಂಟೆಸರಿ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾವಿಭಾಗಗಳ ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಶಾಲೆಗೆ ರಜೆಯನ್ನು ಘೋಷಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಸೋದರ ಅರುಣ್‌ಕುಮಾರ್ ಲಾಲ್ ಮತ್ತು ಪ್ರಾಂಶುಪಾಲರಾದ ಸೋದರ ಸಿಲ್ವೆಸ್ಟರ್ ಸುರೀನ್‌ರವರು ಉದ್ಘಾಟಿಸಿದರು. ಶಾಲೆಯ ಹಳೆಯ ವಿದ್ಯಾರ್ಥಿಯಾದ ಸೋದರ ಮನೋಜ್ ತಿವಾರಿಯವರು ಮಿಷನ್, SMSF, SMRTI ಮತ್ತು SMRTI ನ ಮೌ.ಶಿ.ಪದ್ಧತಿಯ ಹಿನ್ನೆಲೆಯನ್ನು ಹೇಳಿ ವಿಷಯಗಳ ಪರಿಚಯ ಮಾಡಿಕೊಟ್ಟರು.

ಸೋದರ ಸೋದರಿಯರಿಂದ ನಡೆಸಲ್ಪಟ್ಟ ಮೌ.ಶಿ.ಪದ್ಧತಿಯ ಒಂದು ಸಮಾವೇಶದ ನಂತರ ಸೋದರ ಗಿಲ್ಬರ್ಟ್ ಪಿಂಟೋ ಎಸ್.ಜೆ. ಯವರು ಧನ್ಯವಾದಗಳನ್ನು ಅರ್ಪಿಸಿ, ತಾವು ರಾಂಚಿ ಕೇಂದ್ರದ ಅಭ್ಯಾಸಿಗಳಿಗೆ ಮತ್ತು ಮಿಷನ್ನಿಗೆ ಈ ಕಾರ್ಯಾಗಾರ ನಡೆಸಿದ್ದಕ್ಕಾಗಿ ಕೃತಜ್ಞರಾಗಿರುವುದಾಗಿ ಹೇಳಿದರು. ಶಾಲೆಯ ಹಳೆಯ ವಿದ್ಯಾರ್ಥಿಗಳು ಈಗಿನ ವಿದ್ಯಾರ್ಥಿಗಳಿಗಾಗಿ ಕಳಕಳಿಯನ್ನು ಹೊಂದಿರುವುದನ್ನು ಕಂಡು ಸಂತೋಷ ಪಟ್ಟರು.

### ಉರ್ಸುಲೈನ್ ಶಾಲೆ

ಈಬಾರಿ ಸೇಂಟ್ ಅಲೋಶಿಯಸ್ ಶಾಲೆಯಲ್ಲಿ ನಡೆದ ಮೌ.ಶಿ.ಪ. ಕಾರ್ಯಕ್ರಮದ ಸುವಾರ್ತೆಯು ಉರ್ಸುಲೈನ್ ಸಹೋದರಿಯರವರೆಗೆ ತಲುಪಿ, ಅವರು ಸೋದರ ಮುಕೇಶ್ ತನೇಜಾರವರನ್ನು ಅದೇ ರೀತಿಯ ಕಾರ್ಯಕ್ರಮವನ್ನು ಉರ್ಸುಲೈನ್ ಶಿಕ್ಷಕರ ಸಮುದಾಯದ ಸಲುವಾಗಿ ಏರ್ಪಡಿಸಬೇಕೆಂದು ಕೇಳಿಕೊಂಡರು.

27ನೇ ಸೆಪ್ಟಂಬರ್‌ರಂದು ಒಂದು ಮೌ.ಶಿ.ಪ. ಕಾರ್ಯಾಗಾರವು ಸುಮಾರು 100 ಜನ ಮಾಂಟೆಸರಿ, ಪ್ರಾಥಮಿಕ, ಮಾಧ್ಯಮಿಕ, ಅಂತರಕಾಲೇಜು ಮತ್ತು ಇತರ ಉರ್ಸುಲೈನ್ ಶೈಕ್ಷಣಿಕ ಸಂಸ್ಥೆಗಳಿಂದ ಬಂದ ಶಿಕ್ಷಕರಿಗಾಗಿ ಏರ್ಪಡಿಸಲಾಯಿತು. ಸೇಂಟ್ ಅಲೋಶಿಯಸ್ ಶಾಲೆಯಿಂದ ಪಡೆದುಕೊಂಡ ಪ್ರತಿಕ್ರಿಯೆಯನ್ನು ಆಧರಿಸಿ ಈ ಕಾರ್ಯಕ್ರಮವನ್ನು ಚಿಕ್ಕದಾಗಿ, ಚೊಕ್ಕವಾಗಿ ಮತ್ತು ಶಿಕ್ಷಕರೊಂದಿಗೆ ಹೆಚ್ಚಿನ ವಿಚಾರವಿನಿಮಯದೊಂದಿಗೆ ನಡೆಸಲಾಯಿತು.

ಕನಿಷ್ಟ ಎರಡು ಶಾಲೆಗಳೊಂದಿಗಿನ ಮೌ.ಶಿ.ಪ.ದ ಒಪ್ಪಂದವನ್ನು ಕ್ರಮಬದ್ಧವಾಗಿ ನಡೆಸಲಾಗುವುದು. ಇದು ಗುರುಗಳ ಕಾರ್ಯಕ್ರಮವನ್ನು ಜನಗಳಿಗೆ ತಲುಪಿಸಲು ಮತ್ತು ಯುವಜನಕ್ಕೆ ಮೌಲ್ಯಪ್ರದಾನ ಮಾಡುವುದರಲ್ಲಿ ವಿಭಿನ್ನತೆ ತರಲು ಶ್ರೀ



ರಾಮಚಂದ್ರ ಮಿಷನ್ನಿಗೆ ಮಹತ್ತಾದ ಒಂದು ಸದವಕಾಶ ದೊರೆತಂತಾಯಿತು.

### ಬರೌನಿ, ಬಿಹಾರ್

ಅಭ್ಯಾಸಿಗಳು, ಶಿಕ್ಷಕರ ಹಾಗೂ ಮಕ್ಕಳಿಗಾಗಿ ಬರೌನಿಯಲ್ಲಿ 29 ಸೆಪ್ಟಂಬರ್‌ರಂದು ಮೌ.ಶಿ.ಪ. ದ ಕಾರ್ಯಕ್ರಮವನ್ನು ನಡೆಸಲಾಯಿತು. ಪಟ್ನಾ ಕೇಂದ್ರದ ಸೋದರ ಡಾ.ವಿಜಯ್‌ಕುಮಾರವರು ಪ್ರಚಲಿತ ಶಿಕ್ಷಣ ಪದ್ಧತಿಯಲ್ಲಿರುವ ಮೌಲ್ಯಗಳ ಸ್ಥಿತಿಗಳ ಬಗ್ಗೆ ಹಾಗೂ ಮಕ್ಕಳಿಗೆ ಮೌಲ್ಯ ಶಿಕ್ಷಣವನ್ನು ಕೊಡುವ ಅನೇಕ ವಿಧಾನಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ಸೋದರಿ ದೀಪ್ತಿಯವರು ಮಕ್ಕಳಿಗೆ ಪ್ರಯೋಗಗಳ ಮೂಲಕ ಶಿಕ್ಷಣವನ್ನು ಹೇಗೆ ನೀಡುವುದೆನ್ನುವುದರ ಬಗ್ಗೆ ಪ್ರಾತ್ಯಕ್ಷಿಕೆಯನ್ನು ತೋರಿಸಿದರು.

ಎಸ್ ಆರ್ ಸೀ ಎಮ್

# ಎಖೋಸ್ ಇಂಡಿಯ

ವಲಯ ಸುತ್ತುವರಿ

ನವಂಬರ್ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 6

## ಮುಕ್ತ ಸಭೆಗಳು

### ಬರೌನಿ ಸಂಸ್ಕರಣ ತರಬೇತು ತಂತ್ರಜ್ಞರು

ಒತ್ತಡ ನಿರ್ವಹಣೆ ಮತ್ತು ಸ್ವಾಭಿವೃದ್ಧಿಗಳ ಬಗ್ಗೆ ಒಂದು ಕಾರ್ಯಾಗಾರವನ್ನು ಐ.ಓ.ಸಿ.ಎಲ್ ನ ಸಂಸ್ಕರಣ ವಿಭಾಗದ 30 ತರಬೇತು ತಂತ್ರಜ್ಞರಿಗಾಗಿ20 ಸೆಪ್ಟಂಬರ್‌ರಂದು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಕರಣ ಕೇಂದ್ರದ ವರಿಷ್ಠ ಅಧಿಕಾರಿಗಳು ಉಪಸ್ಥಿತರಿದ್ದರು. ಸೋದರ ಪ್ರಬೋಧ್ ಸಾಂಖ್ಯುವವರು ಧ್ಯಾನದ ಮೂಲಕ ಒತ್ತಡ ನಿವಾರನೆ ಎಂಬ ವಿಷಯದ ಬಗ್ಗೆ ಚರ್ಚಿಸಿದರು. 'ಸ್ವಪ್ರಗತಿಗೆ ಧ್ಯಾನದ ಪರಿಣಾಮಕತ್ವ' ಎಂಬ ವಿಷಯದ ಬಗ್ಗೆ ನಡೆದ ಚರ್ಚೆಯ ಅವಧಿಯಲ್ಲಿ ಡಾ.ಜಿ.ಎಮ್.ಭಟ್ನಾಗರ್‌ರವರು ಸಹಜಮಾರ್ಗ ಪದ್ಧತಿಯು ಹೇಗೆ ಸರ್ವತೋಮುಖವಾಗಿ ಕೆಲಸ ಮಾಡುತ್ತದೆ ಎಂದು ವಿಷದೀಕರಿಸಿದರು. ಬೇಗುಸರಾಯ್ ಮತ್ತಿತರ ಹತ್ತಿರದ ಕೇಂದ್ರಗಳಿಂದ ಬಂದ ಅನೇಕ ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

### ರಾಮ್‌ನಗರ್, ಉತ್ತರಾಖಂಡ

ಅರಣ್ಯ ಪಾಲಕರಾದ ಸೋದರ ಎಸ್.ವಿ.ಸಿಂಗ್‌ರ ಕರೆಯ ಮೇಲೆ ಅರಣ್ಯ ವಿಭಾಗದ ಉದ್ಯೋಗಿಗಳಾದ 52 ಜನರು ಒಂದು ಮುಕ್ತ ಸಭೆಯಲ್ಲಿ ಭಾಗವಹಿಸಿದರು. 'ಆಧ್ಯಾತ್ಮದ ಕರೆ' ಎಂಬ ವಿಷಯದ ಮೇಲೆ ಮಿಷನ್ನಿನ ಪ್ರಶಿಕ್ಷಕರು ಮಾಡಿದ ಕಿರುಭಾಷಣವು ಏಕಾಗ್ರತೆಯಿಂದ ಕೇಳಲ್ಪಟ್ಟಿತು ಮತ್ತು ತದನಂತರದ ವಿಚಾರವಿನಿಮಯವು ಸಹಜಮಾರ್ಗದ ಬಗ್ಗೆ ಹೆಚ್ಚು ತಿಳಿಯುವ ಬಗ್ಗೆ ತೀವ್ರ ಆಸಕ್ತಿಯನ್ನು ಶ್ರೋತೃಗಳಲ್ಲಿ ಕೆರಳಿಸಿತು.

### ಉಜ್ಜಯಿನಿ

5ನೇ ಅಕ್ಟೋಬರ್‌ನ ದಿನವು ಈ ಕೇಂದ್ರದ ಸೋದರ ಸೋದರಿಯರಿಂದ ಆಮಂತ್ರಿಸಲ್ಪಟ್ಟ ಸುಮಾರು 110 ಆಧ್ಯಾತ್ಮದ ಅನ್ವೇಷಕರನ್ನು ಕಂಡಿತು. ಈ ಮುಕ್ತಸಭೆಯು 'ಮಾನವ ಜೀವನದ ಗುರಿ' ಮತ್ತು 'ಸಾಧನೆಯ ಮೂಲಶಿಕ್ಷಣ' ಎಂಬ ಎರಡು ಭಾಷಣಗಳಿಂದ ಪ್ರಾರಂಭವಾಯಿತು. ಸೋದರ ಸಂಜಯ್ ಖಂಡೇಲ್ವಾಲ್ ಅವರು 'ಗುರುಗಳು' ಮತ್ತು 'ಮಿಷನ್' ಬಗ್ಗೆ ಮಾತನಾಡಿದರು.

ಈ ಕಾರ್ಯಕ್ರಮದ ಕೊನೆಯಲ್ಲಿ ಸೋದರ ವಿಕಲ್ಪ್ ಮುಂದ್ರಾ ಮತ್ತು ಸೋದರ ವ್ಯೆ.ಜಿ.ಜೋಶಿಯವರು ಒಂದು ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸುಮಾರು 80 ಜನ ಅತಿಥಿಗಳು ಈ ಕಾರ್ಯಕ್ರಮವನ್ನು ಮೆಚ್ಚಿ, ಮಿಷನ್ನನ್ನು ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.




### ಅಹಮದಾಬಾದ್

'ಧ್ಯಾನದ ಮೂಲಕ ಮನಸ್ಸಿನ ನಿರ್ವಹಣೆ' ಎಂಬುದು 28 ಸೆಪ್ಟಂಬರರಂದು ನಡೆದ ಮುಕ್ತಸಭೆಯ ವಿಷಯವಾಗಿತ್ತು. ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳು ಆಮಂತ್ರಿತರಾಗಿದ್ದರು. ವಿದ್ಯಾರ್ಥಿಗಳು ಅಭ್ಯಾಸಿಗಳಾಗಿ ಸಾಧನೆ ಪ್ರಾರಂಭಿಸಲು ಈ ಕಾರ್ಯಕ್ರಮ ಪರಿಣಾಮ ಬೀರಿತು. 'ಒತ್ತಡ ನಿರ್ವಹಣೆ' ಎಂಬ ವಿಷಯದ ಬಗ್ಗೆ ಒಂದು ಪ್ರಸ್ತುತಿಯನ್ನು ಅಹಮದಾಬಾದಿನ ನಿರ್ಮಾ ವಿಶ್ವವಿದ್ಯಾಲಯದ ಆವರಣದಲ್ಲಿ ಅಲ್ಲಿನ ಶಿಕ್ಷಕರಿಗಾಗಿ ನಡೆಸಲಾಯಿತು. ಒತ್ತಡವನ್ನು ಸಮರ್ಪಕವಾಗಿ ನಿಭಾಯಿಸಲು ರಾಮಬಾಣದಂತೆ ಆಗಿರುವ ಧ್ಯಾನದ ಅವಶ್ಯಕತೆ, ದಕ್ಷತೆ ಮತ್ತು ಪರಿಣಾಮಕತ್ವಗಳನ್ನು ಉತ್ತೇಜಿಸುವುದು ಎಂಬ ವಿಷಯಗಳು ಚರ್ಚಿತವಾದವು.

ಶಿಕ್ಷಕವೃಂದದವರು ಸಂಪೂರ್ಣವಾಗಿ ಪ್ರಭಾವಿತರಾಗಿ ಮಿಷನ್ನಿನ ಕಾರ್ಯಕರ್ತರಾದ ಆ ಭಾಷಣಕಾರರನ್ನು ತಮ್ಮ ಸಂಸ್ಥೆಯ ಸ್ಥಾಪನೆಯ ದಿನಾಚರಣೆಯ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಆಹ್ವಾನಿಸಿದರು.

### ಬಿ.ಎಚ್.ಇ.ಎಲ್.,ಹೈದರಾಬಾದ್

ಸೇಂಟ್ ಕ್ಸೇವಿಯರ್ ಪದವಿಪೂರ್ವ ವಿದ್ಯಾಲಯ, ಸ್ಕಾಲರ್ ಪದವಿ ವಿದ್ಯಾಲಯ ಮತ್ತು ರಾವ್ ವಾಣಿಜ್ಯ ವಿದ್ಯಾಲಯದ ಎಪ್ಪತ್ತೈದು ವಿದ್ಯಾರ್ಥಿಗಳು 20 ಸೆಪ್ಟಂಬರ್‌ರಂದು 'ಮನಸ್ಸನ್ನು ಸುನಿಯಂತ್ರಣಗೊಳಿಸಲು ಧ್ಯಾನ' ಎಂಬ ವಿಷಯದ ಮೇಲೆ ಆಧಾರಿತ ಪೂರ್ಣದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಿಷನ್ನಿನ ಗುರಿ, ಯುವಜನರಿಗಾಗಿ ಧ್ಯಾನದ ಪ್ರಾಮುಖ್ಯತೆ, ಸಮಾಜದ ಬದಲಾವಣೆಯ ಕಡೆಗೆ ಮುನ್ನಡೆಸುವ ವ್ಯಯಕ್ತಿಕ ಬದಲಾವಣೆಯ ಪರಿಕಲ್ಪನೆ ಈ ವಿಷಯಗಳ ಮೇಲೆ ಅವರಿಗೆ ವಿಶೇಷ ತಿಳುವಳಿಕೆ ನೀಡಲಾಯಿತು. ಕ್ರಿಯಾತ್ಮಕ ಆಟಗಳು, ಪ್ರಶ್ನೋತ್ತರ ಮತ್ತು ಗುರುಗಳ ಒಂದು ವಿಡಿಯೋ ತುಣುಕುಗಳು ಈ ಕಾರ್ಯಕ್ರಮದ ಮೌಲ್ಯವರ್ಧನೆ ಮಾಡಿದವು. ಭಾಗವಹಿಸಿದ 30 ಜನರು ಸಾಧನೆಯ ಬಗ್ಗೆ ಆಸಕ್ತಿಯನ್ನು ತೋರಿದರು. ಪರಿಚಯಾತ್ಮಕ ಬೈಠಕುಗಳು ಮತ್ತು ತದನಂತರದ ಭೇಟಿಗಳನ್ನು ಪ್ರಸ್ತುತ ಬಿ.ಎಚ್.ಇ.ಎಲ್.ಕೇಂದ್ರದಲ್ಲಿ ಆಯೋಜಿಸಲಾಗಿದೆ.

### ಸಿಬ್ ಸಾಗರ್, ಅಸ್ಸಾಂ



20 ಸೆಪ್ಟಂಬರ್‌ರಂದು ಸಿಬ್ಸಾಗರ್ ಜಿಲ್ಲೆಯಲ್ಲಿ ಸೋದರ ಸುಧೀರ್ ಭಾತಿಯಾರವರಿಂದ ನಡೆಸಲ್ಪಟ್ಟ ಎರಡು ಮುಕ್ತಸಭೆಗಳಲ್ಲಿ ಜೋರ್ಹಾಟ್, ನಜೀರಾ ಮತ್ತು ತೀನ್‌ಸುಖಿಯಾದ ಅಭ್ಯಾಸಿಗಳು ನೆರೆದಿದ್ದರು. ಬೆಳಗಿನ ಕಾರ್ಯಕ್ರಮದಲ್ಲಿ ಹೆಚ್ಚಿನ ಅತಿಥಿಗಳು ವರ್ತಕ ಸಮುದಾಯರಾಗಿದ್ದು ಕೆಲವು ಪತ್ರಕರ್ತರು ಹಾಗೂ ಶಿಕ್ಷಣತಜ್ಞರೊಂದಿಗೆ ಭಾಗವಹಿಸಿದರು. ಸಂಜೆಯ ಕಾರ್ಯಕ್ರಮದಲ್ಲಿ ಆಯಿಲ್ ಇಂಡಿಯಾದ 17 ಅತಿಥಿಗಳು ಹಾಗೂ ಮಾಲೀಕರ ಕುಟುಂಬದವರು ನೆರೆದಿದ್ದರು.ಮಾರನೆಯ ದಿನ 9 ಜನ ಆಕಾಂಕ್ಷಿಗಳು ಪರಿಚಯಾತ್ಮಕ ಬೈಠಕುಗಳನ್ನು ಪ್ರಾರಂಭಿಸಿದರು.

### ಮಸ್ಸೂರಿ, ಉತ್ತರಾಖಂಡ

ದೇಶದ ಪ್ರಮುಖ ಆಡಳಿತ ತರಬೇತಿ ಕೇಂದ್ರವಾದ ಮಸ್ಸೂರಿಯ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ವಿದ್ಯಾಕೇಂದ್ರದಲ್ಲಿ ಸಹಜಮಾರ್ಗವನ್ನು ಕೇಂದ್ರೀಕರಿಸಲಾಯಿತು. ಏಪ್ರಿಲ್ ಮತ್ತು ಮೇ 2008 ರಲ್ಲಿ ಭಾರತೀಯ ಆಡಳಿತ ತರಬೇತಿಯ ಸಮಯದಲ್ಲಿ ಗುರುಗಳು, ಮಿಷನ್ ಮತ್ತು ಪದ್ಧತಿಯ ಬಗ್ಗೆ ಅನೇಕ ಔಪಚಾರಿಕ ಚರ್ಚೆಗಳನ್ನು ಐ.ಎ.ಎಸ್.ಸದಸ್ಯರಾದ ಗ್ಯಾಂಗ್‌ಟಾಕಿನ ಸೋದರ ರವೀಂದ್ರ ತೆಲಾಂಗ್ ಮತ್ತು ಭೋಪಾಲ್ ಕೇಂದ್ರದ ಸಚಿನ್ ಸಿನ್ಹರವರು ನಡೆಸಿಕೊಟ್ಟರು. 'ಧ್ಯಾನದ ಮೂಲಕ ಸಮತೋಲಿತ ಜೀವನಕ್ರಮ ಒಂದು ಆಧ್ಯಾತ್ಮಿಕ ಅನುಸಂಧಾನ' ಎಂಬ ವಿಷಯದ ಬಗ್ಗೆ ಒಂದು ಔಪಚಾರಿಕ ಪ್ರಸ್ತುತಿ ಮತ್ತು ಚರ್ಚೆಯನ್ನು ಆಯೋಜಿಸಲಾಗಿತ್ತು. ಅಂತಹುದೇ ಇನ್ನೊಂದು ಪ್ರಸ್ತುತಿಯನ್ನು 2007 ನೇ ತಂಡದ ಭಾರತೀಯ ಆಡಳಿತ ಸೇವೆಯ ತಾತ್ಕಾಲಿಕ ಅಧಿಕಾರಿಗಳಿಗಾಗಿ 31 ಮೇ 2008 ರಂದು ಆಯೋಜಿಸಲಾಯಿತು. ಅಲ್ಲಿನ ಶ್ರೋತೃಗಳು ಯೋಗ, ಧ್ಯಾನ ಮತ್ತು ಮಾನವ ಮೌಲ್ಯಗಳ ಮೇಲೆ ಅದರ ಉಪಯೋಗೀ ಪರಿಣಾಮಗಳು ಸಮತೋಲಿತ ಜೀವನದಲ್ಲಿ ಪರ್ಯವಸಾನ ಹೊಂದುವ ಒತ್ತಡ ನಿರ್ವಹಣೆ ಎಂಬ ವಿಷಯಗಳ ಮೇಲೆ ಅತ್ಯಾಸಕ್ತಿ ತೋರಿದರು. ಎರಡು ತಿಂಗಳ ತರಬೇತಿ ಕಾರ್ಯಕ್ರಮದ ಕಾಲಾವಧಿಯಲ್ಲಿ ಒಟ್ಟಾರೆ ಶ್ರೀಲಂಕಾದ ಆಡಳಿತ ಸೇವೆಯ ಒಬ್ಬ ಅಧಿಕಾರಿಯೂ ಸೇರಿದಂತೆ 221 ಅಧಿಕಾರಿಗಳು ಮತ್ತು 5 ಕುಟುಂಬದ ಸದಸ್ಯರು ಪ್ರಾರಂಭಿಕ ಬೈಠಕುಗಳನ್ನು ತೆಗೆದುಕೊಂಡರು. ಬಾಬೂಜಿ ಮಹಾರಾಜರ ಜನ್ಮದಿನವಾದ 30 ಏಪ್ರಿಲ್ ಸೇರಿದಂತೆ ಸತ್ಸಂಗಗಳನ್ನು ನಡೆಸಲಾಯಿತು. ಕೆಲವು ಸೋದರರು ಡೆಹ್ರಾಡೂನ್ ಆಶ್ರಮದಲ್ಲೂ ಸಹ ಸತ್ಸಂಗಕ್ಕೆ ಹಾಜರಾದರು. ಗುರುಗಳು ಒಂದು ಸಂದೇಶದಲ್ಲಿ ಹೊಸ ಅಭ್ಯಾಸಿಗಳನ್ನು ಸ್ವಾಗತಿಸಿ ಆಶೀರ್ವದಿಸಿದರು ಮತ್ತು ಮಿಷನ್ನಿನ ಕಾರ್ಯಕರ್ತರಿಗೆ ಅವರೊಂದಿಗೆ ಸಂಪರ್ಕದಲ್ಲಿರಲು ಸೂಚಿಸಿದರು.

## ಉತ್ತರ ಕರ್ನಾಟಕ:

### ವಾಡಿಯಲ್ಲಿ ಮುಕ್ತ ಸಭೆ:

ಆಗಸ್ಟ್ 17ರಂದು ರೈಲ್ವೇ ಕಾಲೋನಿ ಕಾರ್ಮಿಕರ ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಮಾರು ಇಪ್ಪತ್ತು ಶ್ರದ್ಧಾಳುಗಳು ಭಾಗವಹಿಸಿದ್ದರು. ಅವರಲ್ಲಿ ಬಹಳಷ್ಟು ಜನ ರೈಲ್ವೇ ನೌಕರರು. ಡಾ. ಗಜೇಂದ್ರ ಸಿಂಗರು ಮುಖ್ಯ ಭಾಷಣವನ್ನು ಸರಳವಾದ ಹಿಂದಿಯಲ್ಲಿ ಮಾಡಿ ಸಹಜಮಾರ್ಗದ ವಿವಿಧ ವಿಷಯಗಳನ್ನು ನಿರೂಪಿಸಿದರು. ಸೋದರ ರಾಜು ಕಾಶಂಪುರ್‌ಕರ್‌ರವರು ಸಹಜಮಾರ್ಗದ ಅನೇಕ ಸೂಕ್ಷ್ಮ ವಿಷಯಗಳನ್ನು ಕುರಿತು ಮಾತನಾಡಿದರು. ಕಾರ್ಯಕ್ರಮದ ಸಮಾರೋಪವನ್ನು ನಡೆಸಿಕೊಟ್ಟವರು ವಾಡಿಯ ಪ್ರಶಿಕ್ಷಕ ಸೋದರ ಕಿಶನ್ ರಾವ್ ದೇಶಪಾಂಡೆಯವರು. ಚರ್ಚೆ ತುಂಬ ಉತ್ಸಾಹದಾಯಕವಾಗಿದ್ದು, ಐದಾರು ಆಕಾಂಕ್ಷಿಗಳು ಸಾಧನೆ ಆರಂಭಿಸುವ ಉತ್ಸುಕತೆ ತೋರಿದರು.

### ಚಿತ್ತಾಪುರ:

ಚಿತ್ತಾಪುರದ ವಿಠಲ ಮಂದಿರದಲ್ಲಿ ಆಗಸ್ಟ್ 24ರಂದು ನಡೆದ ಕಾರ್ಯಕ್ರಮದಲ್ಲಿ ಸುಮಾರು ಐವತ್ತು ಸ್ಥಳೀಯರು ಪಾಲ್ಗೊಂಡಿದ್ದರು. ಸೋದರ ರಾಜು ಕಾಶಂಪುರ್‌ಕರ್ ನಮ್ಮ ಮಿಷನ್ ಮತ್ತು ಗುರುಗಳ ಬಗ್ಗೆ ಕನ್ನಡದಲ್ಲಿ ಮಾತನಾಡಿದರು. ಅನಂತರ ಡಾ. ಗಜೇಂದ್ರ ಸಿಂಗರು ಮಾನವ ಜೀವನದ ನಿಜವಾದ ಗುರಿ ಮತ್ತು ಸಹಜಮಾರ್ಗ ಪದ್ಧತಿಯ ಬಗ್ಗೆ ಹಿಂದಿಯಲ್ಲಿ ತಿಳಿಸಿಕೊಟ್ಟರು. ಅಂತ್ಯದಲ್ಲಿ, ಸೋದರ ಕೆ. ನಾರಾಯಣ ರಾಯರು ಆಧ್ಯಾತ್ಮಿಕ ಸಾಧನೆಯನ್ನು ತುರ್ತಾಗಿ ಆರಂಭಿಸುವ ಅವಶ್ಯಕತೆಯನ್ನು ಕುರಿತು ಕನ್ನಡದಲ್ಲಿ ಮಾತನಾಡಿದರು. ಎಲ್ಲ ಆಕಾಂಕ್ಷಿಗಳು ಭಾಷಣಗಳನ್ನು ಲಕ್ಷ್ಯಕೊಟ್ಟು ಕೇಳಿ, ಕೊನೆಯಲ್ಲಿ ಮುಂದಿರಿಸಿದ ಕೆಲ ಪ್ರಶ್ನೆಗಳಿಗೆ ವಿವರಣೆ ನೀಡಲಾಯಿತು. ಕಾರ್ಯಕ್ರಮದ ವಂದನಾರ್ಪಣೆಯನ್ನು ಚಿತ್ತಾಪುರದ ಪ್ರಶಿಕ್ಷಕರಾದ ಸೋದರ ಮಧುಕರ್ ರಾವ್ ನಾಯಕರು ನಡೆಸಿಕೊಟ್ಟರು.

### ಗುಲ್ಬರ್ಗಾದಲ್ಲಿ ಗೃಹ ಸಮಾವೇಶ:

ಸೋದರ ಮಹೇಶ ದೇಶಪಾಂಡೆಯವರ ಮನೆಯಲ್ಲಿ ಏರ್ಪಡಿಸಲಾಗಿದ್ದ ಸಮಾವೇಶದಲ್ಲಿ ಭಾಗವಹಿಸಿದವರು 20–25 ವಯೋಮಾನದ ಸುಮಾರು ಹತ್ತು ಯುವಜನರು. ಡಾ. ಗಜೇಂದ್ರ ಸಿಂಗರು ಕನ್ನಡದಲ್ಲೂ ಸೋದರ ಶ್ರೀಕಾಂತ್ ಜೋಷಿಯವರು ಹಿಂದಿಯಲ್ಲೂ ಮಾತನಾಡಿದರು. ಸಹಜಮಾರ್ಗ ಪದ್ಧತಿಯ ಸರಳತೆ ಮತ್ತು ಪರಿಣಾಮಕಾರಿತ್ವಗಳಿಗೆ ಇಲ್ಲಿ ಒತ್ತು ನೀಡಲಾಯಿತು. ಯುವಜನರು ಭಾಷಣಗಳನ್ನು ಲಕ್ಷ್ಯವಿಟ್ಟು ಕೇಳಿ, ಕೊನೆಯಲ್ಲಿ ಅನೇಕ ಪ್ರಶ್ನೆಗಳನ್ನೂ ಮುಂದಿಟ್ಟರು. ಪ್ರತಿಕ್ರಿಯೆ ಉತ್ತಮವಾಗಿತ್ತು. ಕಾರ್ಯಕ್ರಮದುದ್ದಕ್ಕೂ ಗುರುಗಳ ಸಾನ್ನಿಧ್ಯ ಮತ್ತು ಆಧ್ಯಾತ್ಮಿಕ ಪರಿಸರವು ಆ ಮನೆಯಲ್ಲಿ ಸೂಕ್ಷ್ಮರೂಪದಲ್ಲಿ ವ್ಯಾಪಿಸಿಕೊಂಡಿರುವುದರ ಅನುಭವ ಉಂಟಾಯಿತು.






### ಕೊಪ್ಪಳ:

ಸೋದರರಾದ ಜಿ.ಎಸ್. ಕಾಮತ್ ಮತ್ತು ರಾಜು ಕಾಶಂಪೂರ್ಕರ್‌ರು ನಮ್ಮ ಮಿಷನ್ ಕುರಿತು ಇಪ್ಪತ್ತೈದು ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಒಂದು ಪರಿಚಯ ನೀಡಿದರು. ಚರ್ಚೆಯ ನಂತರ ಯಲಬುರ್ಗ ಮತ್ತು ಕೊಪ್ಪಳದ ಚಿಣ್ಣರಿಂದ ಒಂದು ಲಘು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಆಮೇಲೆ ನಮ್ಮ ಸಾಧನೆಯನ್ನು ಉತ್ತಮ ಪಡಿಸುವುದು ಹೇಗೆ ಮತ್ತು ನಮ್ಮ ಕೇಂದ್ರಗಳ ಬೆಳವಣಿಗೆಯನ್ನು ಹೇಗೆ ತ್ವರಿತಗೊಳಿಸುವುದು ಎಂಬ ವಿಷಯಗಳ ಬಗ್ಗೆ ಗುಂಪುಗಳಲ್ಲಿ ಚರ್ಚೆ ನಡೆಯಿತು. ಹತ್ತು ಗುಂಪುಗಳಿದ್ದು, ಎಲ್ಲ ಗುಂಪಿನ ನಾಯಕರು ತಮ್ಮ ತಂಡದ ಅಭ್ಯಾಸಿಗಳು ನಡೆಸಿದ ಚರ್ಚೆಯ ಸಾರಾಂಶವನ್ನು ವ್ಯಕ್ತಪಡಿಸಿದರು. ಈ ಪೂರ್ಣ ದಿನದ ಕಾರ್ಯಕ್ರಮದಲ್ಲಿ ಕೊಪ್ಪಳ, ಗಂಗಾವತಿ, ಬಳ್ಳಾರಿ, ಕಂಪ್ಲಿ–ಕೊಟ್ಟಾಲ, ಯಲಬುರ್ಗಾ ಮತ್ತು ಹುಬ್ಬಳ್ಳಿಯಿಂದ ಬಂದ 130 ಅಭ್ಯಾಸಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಿಂದ ತಾವು ಅಗಾಧ ಪ್ರಯೋಜನ ಪಡೆದುಕೊಂಡಿರುವುದಾಗಿ ಎಲ್ಲ ಅಭ್ಯಾಸಿಗಳ ಅಭಿಪ್ರಾಯ.

## ಪ್ರಬಂಧ ಸ್ಪರ್ಧೆ:



ವಿಶ್ವ ಸಂಸ್ಥೆ ಮತ್ತು ಶ್ರೀ ರಾಮಚಂದ್ರ ಮಿಷನ್‌ನ ಜಂಟಿ ಆಶ್ರಯದಲ್ಲಿ ದೇಶದಾದ್ಯಂತ ಶಾಲೆ, ಕಾಲೇಜು ಮತ್ತು ನಮ್ಮ ಆಶ್ರಮಗಳಲ್ಲಿ ವಿಶ್ವ ಸಂಸ್ಥೆ ಯುವದಿನಾಚರಣೆಯ ಅಂಗವಾಗಿ ಅಖಿಲ ಭಾರತ ಪ್ರಬಂಧ ಸ್ಪರ್ಧೆ ನಡೆಸಲಾಯಿತು. ಮಕ್ಕಳು ಮತ್ತು ಯುವಜನರು ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡುವುದೇ ಈ ಸಂದರ್ಭದ ಉದ್ದೇಶವಾಗಿದ್ದು, ಅದು ಅವರಲ್ಲಿರುವ ಅಗಾಧ ಶಕ್ತಿ, ಉತ್ಸಾಹ, ಆದರ್ಶ ಮತ್ತು ಮುಕ್ತ ಮನಸ್ಸನ್ನು ವೃದ್ಧಿಸಿ ಶಕ್ತಿಯುತವನ್ನಾಗಿ ಮಾಡುತ್ತವೆ.

ಈ ಸ್ಪರ್ಧೆಯಲ್ಲಿ 10–24 ವಯೋಮಾನದ 25000 ಮಕ್ಕಳು ಮತ್ತು ಯುವಜನರು ಭಾಗವಹಿಸಿದ್ದು, ಪ್ರಬಂಧಗಳು ಮೌಲ್ಯಮಾಪನ ಪ್ರಗತಿಯಲ್ಲಿದೆ. 10–16 ವಯೋಮಾನದ ಕಿರಿಯರ ವಿಭಾಗದಲ್ಲಿ ಮಕ್ಕಳು ಸತ್ಯವೇ ಧೈರ್ಯ ಎಂಬ ವಿಷಯದ ಮೇಲೆ ಪ್ರಬಂಧ ಬರೆದರೆ, 17–24 ವಯೋಮಾನದ ಹಿರಿಯರ ವಿಭಾಗದಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸ ಚಾರಿತ್ರ್ಯವನ್ನು ರೂಪಿಸಬಲ್ಲವು ಎಂಬುದು ವಿಷಯವಾಗಿತ್ತು. ಪ್ರಬಂಧಗಳು ಇಂಗ್ಲೀಷ್ ಮತ್ತು ಕೆಲ ಭಾರತೀಯ ಭಾಷೆಗಳಲ್ಲಿ ಬರೆಯಲ್ಪಟ್ಟಿವೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸಂತೋಷದಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರಲ್ಲದೆ, ಅದು ಮಿಷನ್ನಿನ ಸ್ವಯಂಸೇವಕರಿಗೆ ಕಲಿಕೆಯ ಒಂದು ಮಹಾನ್ ಅನುಭವವನ್ನು ತಂದುಕೊಟ್ಟಿತು.

ಸ್ಪರ್ಧೆಯಲ್ಲಿ ಪಂಚಕುಲದ ಡೂನ್ ಶಾಲೆ, ಉತ್ತರದ ಪಂಜಾಬ್ ವಿಶ್ವವಿದ್ಯಾಲಯದಿಂದ ಮೊದಲುಗೊಂಡು ದಕ್ಷಿಣದ ಅಧಿಕ ಸಂಖ್ಯೆಯ ಶಾಲೆಗಳವರೆಗೆ ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ರಾಂಚಿಯ ಶಾಲೆಗಳಲ್ಲಿ ಪ್ರಬಂಧವನ್ನು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಸುಮಾರು 6500 ವಿದ್ಯಾರ್ಥಿಗಳು ಬರೆದಿದ್ದಾರೆ.

ಜಮ್‌ಷೆಡ್‌ಪುರ, ಧನಬಾದ್, ಬೊಕ್ಯಾರೊ, ರಾಮಗಢ, ಲಾಲ್ಪಾನಿಯ, ಪಾಟ್ನಾ, ಸಿಂಧ್ರಿ ಮೊದಲಾದ ಕೇಂದ್ರಗಳೂ ಸಹ ಪ್ರಬಂಧ ಸ್ಪರ್ಧೆಯನ್ನು ನಡೆಸಿದ್ದು, ಅದು ಬಹು ಸಂಖ್ಯೆಯಲ್ಲಿ ಯುವ ವಿದ್ಯಾರ್ಥಿಗಳ ಹೃದಯಗಳನ್ನು ಸ್ಪರ್ಶಿಸಿತು. ಕರ್ನಾಟಕದ ಶಿವಮೊಗ್ಗದಲ್ಲಿ 5ರಿಂದ 10ನೇ ತರಗತಿಯ 50 ಅಂಧ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಈ ವಿದ್ಯಾರ್ಥಿಗಳು ನೀಡಿದ ಉಕ್ತ ಲೇಖನವನ್ನು ಸ್ವಯಂಸೇವಕರು ಬರೆದುಕೊಂಡರು.


ಪ್ರಬಂಧ ಸ್ಪರ್ಧೆಯು ಸ್ವಯಂಸೇವಕರ ಸಂಘಟನಾ ಕೌಶಲ್ಯವನ್ನು ಹಸನುಗೊಳಿಸುವಲ್ಲಿ ನೆರವಾಯಿತು. ಇದರಿಂದಾಗಿ ಕೇಂದ್ರಗಳಿಗೆ ಅನೇಕ ಅಭ್ಯಾಸಿಗಳು ಸಂಸ್ಥೆಗಳನ್ನು ಸಂಪರ್ಕಿಸಿ, ಪ್ರಬಂಧ ಲೇಖನದ ಮೇಲ್ವಿಚಾರಣೆ ಮತ್ತು ಪ್ರಬಂಧಗಳು ಮೌಲ್ಯಮಾಪನ ಮಾಡುವಂತೆ ಹುರಿದುಂಬಿಸಲು ಸಹಾಯವಾಯಿತು. ತಮ್ಮ ಶಾಲೆಗಳಲ್ಲಿ ಸ್ಪರ್ಧೆಯ ವ್ಯವಸ್ಥೆ ಮಾಡುವಲ್ಲಿ ಪ್ರಾಂಶುಪಾಲರು ಮತ್ತು ಶಿಕ್ಷಕರು ತೋರಿದ ಆಸಕ್ತಿಯು ಆಶ್ಚರ್ಯದ ಜೊತೆಗೆ ಸಂತೋಷವನ್ನೂ ತಂದಿತು. ಅನೇಕ ಶಿಕ್ಷಕರು ಮತ್ತು ಸಂಸ್ಥೆಗಳ ಮುಖ್ಯಸ್ಥರು ಸಹಜಮಾರ್ಗ ಧ್ಯಾನ ಪದ್ಧತಿಯ ಬಗ್ಗೆ ಮಾಹಿತಿ ಬಯಸಿದರು ಮತ್ತು ಅವರಲ್ಲಿ ಕೆಲವರು ಸಾಧನೆ ಆರಂಭಿಸಲು ಆಸಕ್ತಿ ತೋರಿದರು.

ಪ್ರಬಂಧ ಸ್ಪರ್ಧೆಯ ಫಲಿತಾಂಶ ನವೆಂಬರ್ ಕೊನೆಯಲ್ಲಿ ಪ್ರಕಟಗೊಳ್ಳುವ ನಿರೀಕ್ಷೆ ಇದೆ. ಪ್ರತಿಯೊಂದು ವಿಭಾಗದಲ್ಲಿ ಇಂಗ್ಲೀಷ್ ಮತ್ತು ಹಿಂದಿಯ ಅತ್ಯುತ್ತಮವಾದ ಮೂರು ಪ್ರಬಂಧಗಳಿಗೆ ಪಾರಿತೋಷಕ ನೀಡಲಾಗುತ್ತದೆ. ಇತರ ಭಾರತೀಯ ಭಾಷೆಗಳ ಅತ್ಯುತ್ತಮ ಮೂರು ಪ್ರಬಂಧಗಳಿಗೆ ಪುಸ್ತಕಗಳನ್ನು ಕೊಡಲಾಗುತ್ತದೆ. ಪ್ರತಿಶತ 60ಕ್ಕಿಂತ ಹೆಚ್ಚು ಅಂಕ ಗಳಿಸುವ ಎಲ್ಲ ಸ್ಪರ್ಧಿಗಳಿಗೆ ಪ್ರತಿಭಾ ಪ್ರಶಸ್ತಿ ಪತ್ರವನ್ನು ವಿತರಣೆ ಮಾಡಲಾಗುವುದು.

# ಪ್ರಭಾ ಕೇಂದ್ರಗಳು:

## ಮತ್ತೊಂದು ಪ್ರಭಾ ಕೇಂದ್ರ ನಿರ್ಮಾಣ ಹಂತದಲ್ಲಿ – ಸೇವಾಶ್ರಮ, ತಿರುವನಂತಪುರಂ







ಕೇರಳದ ರಾಜಧಾನಿ ತಿರುವನಂತಪುರಂ, ಅರುವಿಕ್ಕಾರ ಅಣೆಕಟ್ಟಿನ ಬಳಿ ತನ್ನ ಆಶ್ರಮಕ್ಕೊಂದು ಒಂದು ಮನೋಹರವಾದ ನಿವೇಶನ ಪಡೆದು ಧನ್ಯತೆ ಪಡೆದಿದೆ. ನೆನಪಿಸಿಕೊಳ್ಳಬಹುದಾದ ಸಂಗತಿಯೆಂದರೆ, ಗುರುಗಳು ಬಹಳ ವರ್ಷಗಳ ಹಿಂದೆ ಬಾಬೂಜಿಯವರೊಡನೆ ಈ ಪಟ್ಟಣಕ್ಕೆ ಆಗಿನ ತಿರುವಾಂಕೂರು ಮಹಾರಾಜರ ಅತಿಥಿಯಾಗಿ ಭೇಟಿ ನೀಡಿದ್ದರು. ಆಗ ಮಹಾರಾಜ ಮತ್ತು ಅವರ ಕುಟುಂಬವು ಸತ್ಸಂಗಗಳಲ್ಲಿ ಪಾಲ್ಗೊಂಡಿದ್ದರು. ಕಳೆದ ಒಂದು ದಶಕದಿಂದಲೂ, ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟದ ನಡುವಿನ ಒಂದು ಕಿರಿದಾದ ಭೂಭಾಗದಲ್ಲಿರುವ ತಿರುವನಂತಪುರದ ಅಭ್ಯಾಸಿಗಳು ಒಂದು ಆಶ್ರಮವನ್ನು ಹೊಂದುವ ಕನಸನ್ನು ಕಾಣುತ್ತಿದ್ದರು. ಅವರ ಪ್ರಾರ್ಥನೆಗೆ ಓಗೊಟ್ಟ ಗುರುಗಳು 15.04.2006 ರಂದು ಕೇರಳದ ಎಲ್ಲೆಡೆಯಿಂದ ಮತ್ತು ತಮಿಳುನಾಡಿನ ಸಮೀಪದ ಕೇಂದ್ರಗಳಿಂದ ಬಂದಿದ್ದ ಸಾವಿರಾರು ಅಭ್ಯಾಸಿಗಳ ಸಮಕ್ಷಮದಲ್ಲಿ ಆಶ್ರಮದ ಅಸ್ತಿಭಾರವನ್ನು ನೆರವೇರಿಸಿದರು.

15.04.2006 ತಿರುವನಂತಪುರದ ಅಭ್ಯಾಸಿಗಳು ನೆನಪಿಡುವಂತಹ ದಿನ. ಅಸ್ತಿಭಾರದ ನಂತರ, ನಮ್ಮ ಪ್ರೀತಿಯ ಗುರುಗಳು ನಿವೇಶನದಲ್ಲಿಯೇ ಸತ್ಸಂಗ ನಡೆಸಿ ನಂತರ ತಮ್ಮ ವಿವೇಕವಾಣಿಯಿಂದ ಅಭ್ಯಾಸಿಗಳನ್ನು ಅನುಗ್ರಹಿಸಿದರು.

ಆಶ್ರಮಕ್ಕೆ ಮೂರು ಎಕರೆಗಳ ಸ್ಥಳ ಲಭ್ಯವಿದ್ದು, ಅದಕ್ಕೆ ಲಗತ್ತಾಗಿ ಎರಡು ಎಕರೆ ಪ್ರದೇಶ ಅಭ್ಯಾಸಿಗಳ ಕಾಲೋನಿಗೆಂದು ಮೀಸಲಾಗಿದೆ. ನಿವೇಶನ ತಿರುವನಂತರಪುರ ರೈಲು ನಿಲ್ದಾಣದಿಂದ 17 ಕಿ.ಮೀ ಮತ್ತು ವಿಮಾನ ನಿಲ್ದಾಣದಿಂದ 25 ಕಿ.ಮೀ ದೂರವಿದೆ. ಸಮೀಪದ ಅರುವಿಕ್ಕಾರ ಅಣೆಕಟ್ಟಿನಿಂದ ನಗರಕ್ಕೆ ಕುಡಿಯುವ ನೀರಿನ ಪೂರೈಕೆಯಾಗುತ್ತಿದೆ. ಆಶ್ರಮದ ನಿವೇಶನ ಅಣೆಕಟ್ಟಿನ ಜಲಾನಯನ ಪ್ರದೇಶದಲ್ಲಿದ್ದು ವೃಕ್ಷಗಳಿಂದ ಆವೃತವಾಗಿದೆ. ಅಲ್ಲಿನ ಹಸಿರು ಮತ್ತು ದೃಶ್ಯಾವಳಿಯನ್ನು ನೋಡುವುದೇ ಒಂದು ರೋಮಾಂಚಕಾರಿ ಅನುಭವ. ನಲ್ಮೆಯ ಗುರುಗಳು ಆಶ್ರಮಕ್ಕೆ ಇತ್ತ ಹೆಸರು 'ಸೇವಾಶ್ರಮ'. ಈ ಆಶ್ರಮ ತಿರುವನಂತಪುರ– ವೆಲ್ಲನಾಡು ಬಸ್‌ಮಾರ್ಗದ ಎಡಭಾಗದಲ್ಲಿದೆ.

ನಿವೇಶನದಲ್ಲಿನ ಒಂದು ಸಣ್ಣ ಕಟ್ಟಡವನ್ನು ತಾತ್ಕಾಲಿಕ ಧ್ಯಾನ ಮಂದಿರವಾಗಿ ಮಾರ್ಪಾಟುಮಾಡಲಾಗಿದ್ದು, ಅಲ್ಲಿ ಭಾನುವಾರದ ಸತ್ಸಂಗ ನಡೆಯುತ್ತಿದೆ. ಗುರುಗಳು ಆಶ್ರಮದ ವಿನ್ಯಾಸಕ್ಕೆ ಒಪ್ಪಿಗೆ ನೀಡಿದ್ದು, ಅಡಿಪಾಯದ ಕಾರ್ಯ ಮುಕ್ತಾಯ ಹಂತದಲ್ಲಿದೆ.

ಗುರುಗಳು ಹೇಳಿದಂತೆ ಆಶ್ರಮಗಳು ಪ್ರಭಾಕೇಂದ್ರಗಳು. ಅವು ಅಂಧಕಾರವನ್ನು ದೂರಮಾಡಿ ದೈವೀಪ್ರಕಾಶವನ್ನು ಪ್ರಸರಿಸುತ್ತವೆ. ನಾವೆಲ್ಲರೂ ಈ ಹೊಸ ಪ್ರಭಾಕೇಂದ್ರ ನಮ್ಮ ಪೂಜ್ಯ ಗುರುಗಳಿಂದ ಉದ್ಘಾಟನೆಯಾಗುವುದನ್ನು ಕಾತರದಿಂದ ಎದುರುನೋಡುತ್ತಿದ್ದೇವೆ ಮತ್ತು ಮನಸ್ಸು ಅದಕ್ಕಾಗಿ ಚಡಪಡಿಸುತ್ತಿದೆ. ಆ ದಿನ ಹೆಚ್ಚು ದೂರವಿಲ್ಲವೆಂಬ ಭರವಸೆ ನಮಗಿದೆ.

## ಎಸ್.ಆರ್.ಸಿ.ಎಮ್ ಗುರುತಿನ ಕಾರ್ಡುಗಳು

ಅಭ್ಯಾಸಿಗಳ ಗುರುತಿಗೆಂದು ಮಿಷನ್ನಿನಲ್ಲಿ ಎರಡು ವಿಧದ ಕಾರ್ಡುಗಳು ಬಳಕೆಯಲ್ಲಿವೆ. ಯಾವುದೇ ಅಭ್ಯಾಸಿಯು ಇವೆರಡರಲ್ಲಿ ಒಂದನ್ನು ಹೊಂದಿರಬೇಕು.

### ಪರಿಚಯದ ಕಾರ್ಡು:

ಸಹಜಮಾರ್ಗ ಅಭ್ಯಾಸವನ್ನು ಪ್ರಾರಂಭಿಸುವ ಅಭ್ಯಾಸಿಗೆ ಇದನ್ನು ನೀಡಲಾಗುತ್ತಿದ್ದು, ಅದರ ಅವಧಿಯು ನೀಡಲಾದ ದಿನದಿಂದ ಒಂದು ವರ್ಷ ಮಾತ್ರ. ಈ ಕಾರ್ಡು ಪಡೆಯಲು ಅಭ್ಯಾಸಿಯು 'ಅಭ್ಯಾಸಿ ಪರಿಚಯ ನಮೂನೆ' ಯನ್ನು ಭರ್ತಿ ಮಾಡಿ, ಪರಿಚಯಿಸಿದ ಪ್ರಶಿಕ್ಷಕರಿಗೆ ಕೊಡಬೇಕು.

### ಅಭ್ಯಾಸಿ ಕಾರ್ಡು:

ಈ ಕಾರ್ಡನ್ನು ಅಭ್ಯಾಸಿಗೆ ಕನಿಷ್ಠ ಆರು ತಿಂಗಳ ಕ್ರಮಬದ್ಧ ಸಾಧನೆಯ ನಂತರ ನೀಡಲಾಗುತ್ತದೆ. ಈ ಕಾರ್ಡು ಪಡೆಯಲು:

- ಅಭ್ಯಾಸಿ ಪರಿಚಯದ ಕಾರ್ಡು ಹೊಂದಿರಬೇಕು
- ಆರು ತಿಂಗಳು ಕ್ರಮಬದ್ಧವಾಗಿ ಅಭ್ಯಾಸ ಮಾಡಿರಬೇಕು.
- ಪ್ರಶಿಕ್ಷಕರ ಶಿಫಾರಸು ಅಗತ್ಯ
- ಹಳೆಯ ಅಥವಾ ಕಳೆದು ಹೋದ ಕಾರ್ಡಿಗೆ ಬದಲಾಗಿ ಅಭ್ಯಾಸಿಗಳು ಹೊಸ ಕಾರ್ಡು ಪಡೆಯಬಹುದು.

ಬೇರೆ ಯಾವುದೇ ವಿಧದ ಕಾರ್ಡು ಸಿಂಧುವಲ್ಲ. ಕಾರ್ಡು ಪಡೆಯಲು ಅಥವಾ ಸಂಬಂಧಿಸಿದ ಮಾಹಿತಿಯನ್ನು ತಿಳಿಯಲು. ಅಭ್ಯಾಸಿಯು ಸ್ಥಳೀಯ ಸದಸ್ಯತ್ವ ಸಹವರ್ತಿಯನ್ನು ಅಥವಾ ಕೇಂದ್ರ ಮುಖ್ಯಸ್ಥರನ್ನು ಸಂಪರ್ಕಿಸಬೇಕು. ಸ್ಥಳೀಯ ಸಹವರ್ತಿ ನೋಡಲ್ ಸಹವರ್ತಿಗಳ ಸಂಪರ್ಕದಲ್ಲಿರುತ್ತಾರೆ. ನೋಡಲ್ ಸಹವರ್ತಿಗಳನ್ನು ಸಂಪರ್ಕಿಸುವ ವಿವರ ನಿಮ್ಮ ವಲಯದ ಮುಖ್ಯಸ್ಥರ ಬಳಿ ಇರುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ in.idcard@srcm.org.

**To subscribe to this Newsletter please visit http://www.srcm.org/centers/as/in/newsletter/index.jsp**
**For feedback, suggestions and news articles please send email to in.newsletter@srcm.org**

© 2008 Shri Ram Chandra Mission ("SRCM"). All rights reserved.
“Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.
This message may be edited for content and is intended exclusively for the members of SRCM.